ಗುರುವಾರ 5ನೇ ಫೆಬ್ರವರಿ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)
ಅವರು ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು:– ಇಂದಿನ ಕಾರ್ಯಕ್ರಮ, ಸನ್ಮಾನ್ಯ ಮುಖ್ಯಮಂತ್ರಿಗಳು 2004–05ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

1) 2004–05ನೇ ಸಾಲಿನ ಆಯವ್ಯಯ ಪತ್ರದ ಮಂಡನೆ:

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)"– ಸನ್ಮಾನ್ಯ ಸಭಾಧ್ಯಕ್ಷರೇ,

1. ನಾನು ಕರ್ನಾಟಕ ಸರ್ಕಾರದ 2004-05ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸುತ್ತಿದ್ದೇನೆ.

2. ನನ್ನ ಸರ್ಕಾರದ ಸತತ ಐದನೇ ಆಯವ್ಯಯ ಪತ್ರವನ್ನು ಮಂಡಿಸುತ್ತಿರುವುದು ನನಗೆ ಗೌರವದ ಸಂಗತಿಯಾಗಿದೆ. ರಾಜ್ಯದ ಅಭಿವೃದ್ಧಿ ಮತ್ತು ಜನರ ಪ್ರಗತಿಯ ದೃಷ್ಟಿಯಿಂದ ಕಳೆದ ನಾಲ್ಕು ವರ್ಷಗಳು ಮಹತ್ವದ್ದಾಗಿದ್ದವು.

3. 'ಚೈತನ್ಯಶೀಲ ಕರ್ನಾಟಕವು' ಇಂದು ಭಾರತದ ರಾಜ್ಯಗಳ ಪೈಕಿ ಹಿರಿಮೆಯ ಸ್ಥಾನ ಪಡೆದುಕೊಂಡಿದ್ದು ಪುನಶ್ಚೇತನ ಭಾರತಕ್ಕೆ ಗಣನೀಯ ಪಾಲನ್ನು ನೀಡಿದೆ.

4. ನನ್ನ ಪ್ರಥಮ ಆಯವ್ಯಯ ಪತ್ರದಲ್ಲಿ ನಾನು ರಾಜ್ಯವು ಎದುರಿಸುತ್ತಿದ್ದ ಮುಖ್ಯ ಸವಾಲುಗಳನ್ನು ಗುರುತಿಸಿದ್ದೆ. ಮಹಿಳಾ ಸಬಲೀಕರಣ, ಹೆಚ್ಚಿನ ಆರ್ಥಿಕ ಬೆಳವಣಿಗೆ, ಕೃಷಿ ಬಲವರ್ಧನೆ, ನೀರಾವರಿಗೆ ಬಂಡವಾಳ ಹೂಡಿಕೆ, ಮೂಲಸೌಕರ್ಯಗಳ ವಿಸ್ತರಣೆ, ಪ್ರಗತಿಪರ ಕೈಗಾರಿಕಾ ನೀತಿ, ಉತ್ತಮ ಆಡಳಿತ ಮತ್ತು ಕುಶಲ ಆರ್ಥಿಕ ನಿರ್ವಹಣೆ ಇವು ನನ್ನ ಸವಾಲುಗಳಾಗಿದ್ದವು.

5. ನನ್ನ ಸರ್ಕಾರವು ಈ ಎಲ್ಲ ಸವಾಲುಗಳನ್ನು ಗಣನೀಯ ಯಶಸ್ಸಿನೊಂದಿಗೆ ಎದುರಿಸಿರುವುದು ನನಗೆ ಸಂತೃಪ್ತಿ ತಂದಿದೆ.

6. ಇಂದು ಇಡೀ ಜಗತ್ತೇ ನೋಡುತ್ತಿರುವಂತೆ, ಕರ್ನಾಟಕವು ರಾಷ್ಟ್ರದ ಆರ್ಥಿಕ ರಂಗದಲ್ಲಿ, ರಾಜ್ಯಾಡಳಿತ ವಲಯದಲ್ಲಿ ಮತ್ತು ಸಮಾಜದಲ್ಲಿ ಅಗ್ರನಾಯಕನಾಗಿ ಕಂಗೊಳಿಸುತ್ತಿದ್ದು ಜಾಗತಿಕ ಕರ್ನಾಟಕವಾಗಿ ಹೊರ ಹೊಮ್ಮುತ್ತಿದೆ. ಇದನ್ನು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಕಳೆದ ಐದು ವರ್ಷಗಳಲ್ಲಿ ಸತತ ಮೂರು ಬರಗಾಲದ ವರ್ಷಗಳಿದ್ದರೂ ಸಹ ಜೀವನದ ಎಲ್ಲ ನಡೆಗಳಲ್ಲಿ, ಎಲ್ಲ ವರ್ಗದ ಜನರು ಶಾಂತಿ, ಸಮೃದ್ಧಿ ಮತ್ತು ಪ್ರಗತಿಯನ್ನು ಕಂಡಿದ್ದಾರೆ. ನನ್ನ ಸರ್ಕಾರವು ಸಂಕಷ್ಟಕ್ಕೆ ಒಳಗಾದ ಜನರ ನೆರವಿಗೆ ಸಕಾಲದಲ್ಲಿ ಧಾವಿಸಿ ಸಂರಕ್ಷಿಸಿದ್ದು ಇದಕ್ಕೆ ಮುಖ್ಯ ಕಾರಣವಾಗಿದೆ. ಈ ಬಾರಿ ಬರಪರಿಹಾರದ ನೆರವು ಮತ್ತು ಅಗಾಧತೆ ಹಿಂದೆಂದೂ ಕಂಡರಿಯದಷ್ಟು ಬೃಹತ್ ಪ್ರಮಾಣದಲ್ಲಿತ್ತು.

7. ರಾಜ್ಯದ ಜನತೆಯ ತಾಳ್ಮೆ ಮತ್ತು ಸಹನೆಗಳಿಗೆ ನಾನು ನಮಿಸಲೇಬೇಕು. ನಮಿಸುತ್ತೇನೆ. ನಮ್ಮ ರಾಜ್ಯವು ಪ್ರತಿಕೂಲ ವಾತಾವರಣದಲ್ಲಿಯೂ ಸಹ ಬಲವಾದ ಆರ್ಥಿಕ ಬೆಳವಣಿಗೆ

ತೋರಿಸಿರುವುದು ನನ್ನ ಸರ್ಕಾರದ ನೀತಿಗಳು ಫಲ ನೀಡಿರುವುದಕ್ಕೆ ಸಾಕ್ಷಿಯಾಗಿದ. ಅಲ್ಲದೆ ರಾಜ್ಯದ ಜನತೆಯು ನಮ್ಮ ಮೇಲೆ ಇಟ್ಟಿರುವ ವಿಶ್ವಾಸದ ದ್ಯೋತಕವಾಗಿದೆ. ನಾವು ಹತಾಶೆಯ ಅಂಗಳದಿಂದ ಸುಮ್ಮನೆ ಮೇಲೆದ್ದು ಬಂದಿಲ್ಲ. ಅಲ್ಲಿಂದ ಬೆಳಗುತ್ತಲೇ ಹೊರಹೊಮ್ಮಿದ್ದೇವೆ.

8. ಇದು ಮಿರ್ಜಾ ಗಾಲಿಬ್‌ರವರ ಆಶಯವಾಣಿ.

ಹಮ್ ಪರ್ವರಿಶೆ ಖಾಕೆ ವತನ್
ಕರ್ತೇ ರಹೇ ಹೈಂ
ಬುಲಂದೀ ಕೆ ಮೋಕಾಮೋ ಕೊ
ಛೂತೇ ರಹೇ ಹೈಂ
ವಾದೋಂ ಕೊ ನಿಭಾನೆಕಾ
ಜತನ್ ಕರ್ತೇ ರಹೇಂಗೆ.
ಹಾತೋಸೇ ಮಿಲೇ ಹಾತ್
ತೋ ಫಿರ್ ಉನ್‌ಕೀ ಮದದ್ ಸೆ
ವೀರಾನೆ ಭೀ ಹೋಂ ಗರ್!
ತೋ ಚಮನ್ ಕರ್ತೇ ರಹೇಂಗೆ
"ಕನ್ನಡದ ಕಾಯ್ದು ಬೆಳೆಸುತ್ತಿದ್ದೇವೆ ಈ ನಾಡು ಮಣ್ಣನ್ನು, ತುಂಬು
ಜತನದಿಂದ ನಾವು, ಕ್ರಮಿಸಿ
ಏರುತ್ತಿದ್ದೇವೆ ಉನ್ನತೋನ್ನತ ಶೃಂಗ
ಧೀರ ಸಾಹಸ ಶ್ರಮಗಳಿಂದ,
ಮಾಡುತ್ತಿದ್ದೇವೆ ಸರ್ವ ಯತ್ನವನ್ನು
ಪಾಲಿಸಲು.
ನಮ್ಮ ಕೊಟ್ಟ ಮಾತು ಮಾಡುವೆವು
ನಂದನವನ, ಎಂಥ ಮರುಭೂಮಿಯನ್ನು
ಕೂಡಿಸಿದರೆ ನಮ್ಮ ಕೈಗಳಿಗೆ ನಿಮ್ಮ ಕೈ.

ಆರ್ಥಿಕ ಪರಿಸ್ಥಿತಿ

9. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದ ಆರ್ಥಿಕ ಸ್ಥಿತಿಯು ಚೈತನ್ಯದಿಂದ ಪುಟಿಯುತ್ತಿರುವುದನ್ನು ನಾವು ನೋಡಿದ್ದೇವೆ. ಇತ್ತೀಚಿನ ಅಂದಾಜುಗಳ ರೀತ್ಯಾ 2003-04ನೇ ಸಾಲಿನಲ್ಲಿ ಜಿಎಸ್‌ಡಿಪಿಯ ದರವು ಶೇ.6.2 ರಷ್ಟು ಬೆಳವಣಿಗೆಯನ್ನು ಸೂಚಿಸುತ್ತಿವೆ. ಸತತ ಮೂರು ಬರಗಾಲಗಳ ಹೊಡೆತದ ನಡುವೆಯೂ ನಾವು ಕಳೆದ ಐದು ವರ್ಷಗಳಲ್ಲಿ ಜಿಎಸ್‌ಡಿಪಿಯ ಶೇ.5ರ ಸರಾಸರಿ ವಾಸ್ತವ ಬೆಳವಣಿಗೆಯನ್ನು ಸಾಧಿಸಿದ್ದೇವೆ. ಬರಗಾಲದ ಕಾರಣದಿಂದಾಗಿ ಕೃಷಿ ಮತ್ತು ಪೂರಕ ವಲಯಗಳಲ್ಲಿ 2001-02 ಮತ್ತು 2002-03 ರಲ್ಲಿ ಋಣಾತ್ಮಕ ಬೆಳವಣಿಗೆ ಕಂಡಿತು.

10. ಕುಗ್ಗಿದ ಗ್ರಾಮೀಣ ಆದಾಯ ಮತ್ತು ವಿನಿಯೋಗ ವೆಚ್ಚಗಳು ಕೈಗಾರಿಕಾ ವಲಯದ ಮೇಲೆ ಸರಣಿ ಪರಿಣಾಮ ಬೀರಿದ್ದರಿಂದ ಆ ವರ್ಷಗಳಲ್ಲಿ ವಾಸ್ತವ ಬೆಳವಣಿಗೆ ದರವು ಶೇ.2

ಮತ್ತು ಶೇ.4ಕ್ಕೆ ಇಳಿಯಿತು. ಆದರೆ ನಂತರ 2003-04 ರಲ್ಲಿ ಸತತ ಮೂರನೆ ಮುಂಗಾರಿನ ವೈಫಲ್ಯದ ನಡುವೆಯೂ ಕೈಗಾರಿಕಾ ಉತ್ಪಾದನೆಯು ಚೇತರಿಸಿಕೊಂಡು ಶೇ.6 ರ ಬೆಳವಣಿಗೆ ಕಂಡಿದೆ.

11. ಈ ಚೇತರಿಕೆಗೆ "ಫೀಲ್-ಗುಡ್" ಅಂಶವೊಂದೇ ಕಾರಣವೆಂದು ನನಗೆ ಅನ್ನಿಸುತ್ತಿಲ್ಲ. ಖಾಸಗಿ ಹೂಡಿಕೆದಾರರನ್ನು ಆಕರ್ಷಿಸಲು ಉತ್ತಮ ಗುಣಮಟ್ಟದ ಮೂಲಸೌಕರ್ಯಗಳು ಮತ್ತು ಹಿತಕರ ವಾತಾವರಣವನ್ನು ಒದಗಿಸಲು ನನ್ನ ಸರ್ಕಾರವು ಪಟ್ಟಿರುವ ಸತತ ಪರಿಶ್ರಮವೇ ಇದಕ್ಕೆ ಕಾರಣ ಎನ್ನುವುದು ನನ್ನ ನಂಬಿಕೆ.

12. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಆರ್ಥಿಕ ಚೇತನಕ್ಕೆ ರಾಜ್ಯದ ಆರ್ಥಿಕತೆಯ ಬದಲಾವಣೆ ಮತ್ತು ಸೇವಾ ವಲಯದ ಶೇ.10 ರ ಸರಾಸರಿ ಬೆಳವಣಿಗೆಯು ಪ್ರಧಾನ ಕಾರಣವಾಗಿದೆ. ಹಣದುಬ್ಬರವು ನಿಯಂತ್ರಣದಲ್ಲಿದ್ದು ಶೇ. 4.5 ರಷ್ಟು ಪ್ರಮಾಣದಲ್ಲಿದೆ ಮತ್ತು ಬಡ್ಡಿ ದರಗಳು ಕೆಳಮುಖವಾಗಿವೆ. ಮತ್ತೊಂದು ಆರೋಗ್ಯಕರ ಅಂಶವೆಂದರೆ, 1998-99 ರಲ್ಲಿದ್ದ 17,000 ರೂ.ಗಳ ತಲಾ ಆದಾಯವು 2003-04ರ ವೇಳೆಗೆ 22,000 ರೂ.ಗಳಿಗೆ ಏರಿದೆ. ಶಿಕ್ಷಣ ಮತ್ತು ಮಹಿಳಾ ಸಬಲೀಕರಣಕ್ಕೆ ನನ್ನ ಸರ್ಕಾರವು ವಿಶೇಷ ಒತ್ತು ನೀಡಿದ್ದರಿಂದ ಇದು ಸಾಧ್ಯವಾಯಿತು.

13. ಆದರೆ ಕೃಷಿಯಲ್ಲಿ ಕೊಂಚ ಕಳವಳದ ಪರಿಸ್ಥಿತಿ ಉದ್ಭವಿಸಿದೆ. ಕೃಷಿ ಮೂಲ ಸೌಕರ್ಯಗಳಿಗೆ ಮತ್ತು ವಿಸ್ತರಣಾ ಸೇವೆಗಳಿಗೆ ನಾವು ಅಪಾರ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿದ್ದರೂ ಸತತವಾಗಿ ಕಾಡಿದ ಬರಗಾಲದಿಂದಾಗಿ ಬೆಳವಣಿಗೆ ಸಾಧಿಸುವ ನಮ್ಮ ಪ್ರಯತ್ನಗಳು ನಿರೀಕ್ಷಿತ ಫಲ ನೀಡಲಿಲ್ಲ.

14. ನೀರಾವರಿಯನ್ನು ರೈತರ ಅಂಗಳಕ್ಕೆ ತೆಗೆದುಕೊಂಡು ಹೋಗುವುದು ನನ್ನ ನಿರಂತರ ಯೋಜನೆಯಾಗಿದೆ. ಸಣ್ಣ ರೈತರನ್ನು ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ರೈತರಿಗೆ ಸುರಕ್ಷತೆ ಒದಗಿಸಿ ಬಲಗೊಳಿಸಬೇಕಾಗಿದೆ. ಗ್ರಾಮೀಣ ಮಹಿಳೆಯರನ್ನು ಗೃಹ ಬಂಧನದಿಂದ ಬಿಡುಗಡೆ ಮಾಡಿ ಆರ್ಥಿಕ ಸ್ವಾವಲಂಬನೆ ಒದಗಿಸಲು ಮಹಿಳಾ ಅಭಿವೃದ್ಧಿ ಮಾದರಿಯನ್ನು ನಾನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ. ಮೂಲೆ ಗುಂಪಾಗಿರುವ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳ ಭವಿಷ್ಯವನ್ನು ಹಸನುಗೊಳಿಸಲು ಅವರಿಗೆ ನಾನು ಸಾಂಸ್ಥಿಕ ನೆರವನ್ನು ಕಲ್ಪಿಸುತ್ತಿದ್ದೇನೆ. ನಮ್ಮ ನಾಡಿನ ಎಲ್ಲ ಮಕ್ಕಳ ಮನಸ್ಸಿಗೆ ಶಿಕ್ಷಣ ಮತ್ತು ದೇಹಕ್ಕೆ ಪೌಷ್ಟಿಕತೆ ಒದಗಿಸುವುದು ನಮ್ಮ ಪ್ರಯತ್ನವಾಗಿದೆ. ಯುವಶಕ್ತಿಯನ್ನು ಸಂಘಟಿಸಿ ತನ್ಮೂಲಕ ಭವಿಷ್ಯ ಕರ್ನಾಟಕದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು ನನ್ನ ಉದ್ದೇಶ.

15. ಈ ಮುಂಗಡ ಪತ್ರದಲ್ಲಿನ ಕ್ರಮಗಳಿಂದ ಮುಂದಿನ ಐದು ವರ್ಷಗಳಲ್ಲಿ ಶೇ.10 ರ ವಾಸ್ತವ ಬೆಳವಣಿಗೆಯನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಇದರಿಂದ ನಮ್ಮ ಶೇಕಡಾ 90 ರಷ್ಟು ಜನತೆಯನ್ನು ಬಡತನ ಮತ್ತು ವಂಚಿತತೆಯಿಂದ ರಕ್ಷಿಸುವ ಆಶಾಭಾವನೆ ನನಗಿದೆ. ಹಲವಾರು ಅಡೆತಡೆಗಳಿದ್ದರೂ ಕರ್ನಾಟಕವು ಅಭಿವೃದ್ಧಿ ಪಥದಲ್ಲಿ ದಿಗಂತಕ್ಕೆ ಹಾರಲು ಸನ್ನದ್ಧವಾಗಿದೆ. ನನ್ನ ಈ ಉಲ್ಲೇಖವನ್ನು ಈಗಷ್ಟೇ ಕಾಮಗಾರಿ ಆರಂಭಿಸಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮಾತ್ರ ಸೀಮಿತವಾಗಿದೆಯೆಂದು ಭಾವಿಸಬೇಡಿ.

ವಿತ್ತೀಯ ಪರಿಸ್ಥಿತಿ:

16. ಸತತ ಮೂರು ಬರಗಾಲದ ಜೊತೆಗೆ, ನಮ್ಮ ಬೆನ್ನಿಗಂಟಿಕೊಂಡೇ ಬಂದಿದ್ದ ದುರ್ಬಲ ವಿತ್ತೀಯ ಪರಿಸ್ಥಿತಿಯು ನನ್ನ ಆರ್ಥಿಕ ಸುಧಾರಣೆಯ ಪ್ರಯತ್ನಗಳನ್ನು ನಿರ್ಬಂಧಿಸಿದೆ. ನನ್ನ

ಸರ್ಕಾರದ ವಿತ್ತೀಯ ಬಿಕ್ಕಟ್ಟು ಹಿಂದಿನ ಸರ್ಕಾರವು ನೀಡಿದ್ದ ತೆರಿಗೆ ಮತ್ತು ತೆರಿಗೆಯೇತರ ರಿಯಾಯಿತಿಗಳಿಂದ ಉದ್ಭವಿಸಿದ್ದು ಇದರಿಂದಾಗಿ ಆದಾಯ ತಳಹದಿಯು ಕಿರಿದಾಗಿದೆ. ಸರ್ಕಾರಿ ವೆಚ್ಚಕ್ಕೆ ಸಂಬಂಧಿಸಿದಂತೆ ಅಂಗಳದಲ್ಲಿ ವಿಪರೀತವಾಗಿ ಏರಿಕೆಯಾಗುತ್ತಿರುವ ಸಿಬ್ಬಂದಿವೆಚ್ಚ, ಸರಿಯಾಗಿ ಕೇಂದ್ರೀಕರಿಸದ ಹಾಗೂ ಯೋಗ್ಯವಲ್ಲದ ಸಹಾಯಧನಗಳು, ಹಲವಾರು ಹಿತಾಸಕ್ತ ಗುಂಪುಗಳಿಗೆ ನೀಡುತ್ತಿರುವ ಅನುದಾನಗಳು, ಕಾಲ ಮತ್ತು ವೆಚ್ಚ ಮೀರಿದ ಮೂಲ ಸೌಕರ್ಯ ಯೋಜನೆಗಳು ನಮ್ಮ ಚಾಲ್ತಿ ಖಾತೆಯಲ್ಲಿ ವಿಪರೀತ ಕೊರತೆಯನ್ನು ಉಂಟು ಮಾಡಿವೆ.

17. ಈ ಬಿಕ್ಕಟ್ಟುಗಳನ್ನು ಪರಿಹರಿಸಲು ಯಾವುದೇ ರೀತಿಯ ಬಿಡಿ ಬಿಡಿಯಾದ, ತಾತ್ಕಾಲಿಕ ಸುಧಾರಣಾ ಕ್ರಮಗಳು ಯಶಸ್ವಿಯಾಗಲಾರವು ಎನ್ನುವುದು ನನ್ನ ಭಾವನೆ. ಆದ್ದರಿಂದ ಮಧ್ಯಮಾವಧಿ ಹಾಗೂ ದೀರ್ಘಾವಧಿಯ ಮುನ್ನೋಟವನ್ನು ಒಳಗೊಂಡಿರುವ ಸಮಗ್ರ ಹಾಗೂ ವ್ಯವಸ್ಥಿತ ಸುಧಾರಣೆ ನಮ್ಮ ತುರ್ತು ಅಗತ್ಯವಾಗಿತ್ತು.

18. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಪದ್ಧತಿಗಳಿಗೆ ನಾವು ಸುಧಾರಣಾ ಚೌಕಟ್ಟನ್ನು ಅಳವಡಿಸಿರುವುದರಿಂದ ರಾಜಸ್ವದ ಕೊರತೆ ಕಡಿಮೆಯಾಗಲು ಕಾರಣವಾಯಿತು. ಮತ್ತು ಆದ್ಯತಾವಲಯಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಬಿಡುಗಡೆಗೊಳಿಸಲು ನೆರವಾಯಿತು. ಇದು ಬಡತನವನ್ನು ನಿಯಂತ್ರಿಸಿ ಜನಸಾಮಾನ್ಯರ ಜೀವನ ಗುಣಮಟ್ಟವನ್ನು ಸುಧಾರಿಸಿದೆ.

19. ನಮ್ಮ ಸುಧಾರಣಾ ಕ್ರಮಗಳು ಕರ್ನಾಟಕವನ್ನು ಆರ್ಥಿಕ ಸುಭದ್ರತೆಯ ತಾಣದೆಡೆಗೆ ಕರೆದೊಯ್ಯುತ್ತಿವೆ. ನಾವು 2005-06ರ ವೇಳೆಗೆ ರಾಜಸ್ವ ಉಳಿಕೆಯನ್ನು ಸಾಧಿಸಲು ಮತ್ತು ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇ.3ಕ್ಕೆ ಇಳಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸಿದ್ದೇವೆ. ರಾಜ್ಯವು 2001-02 ರಲ್ಲಿ **ಶೇ.5.36** ರಷ್ಟಿದ್ದ ವಿತ್ತೀಯ ಕೊರತೆಯನ್ನು 2003-04 ರಲ್ಲಿ **ಶೇ.4.26**ಕ್ಕೆ ಮತ್ತು ಇದೇ ಅವಧಿಯಲ್ಲಿ ರಾಜಸ್ವ ಕೊರತೆಯನ್ನು **ಶೇ.3** ರಿಂದ **ಶೇ.1.01ಕ್ಕೆ** ಇಳಿಸಿದೆ. ಸತತ ಬರಗಾಲಗಳು ಇಲ್ಲದಿದ್ದರೆ ನಮ್ಮ ಸಾಧನೆಗಳು ಇನ್ನಷ್ಟು ಬಲವಾಗಿರುತ್ತಿದ್ದವು. ಕರ್ನಾಟಕವು ಆರ್ಥಿಕ ತಿದ್ದುಪಡಿಗಳಿಗೆ ತೋರಿಸುತ್ತಿರುವ ಬದ್ಧತೆಯನ್ನು ಇದು ನಿಚ್ಚಳಗೊಳಿಸಿದೆ. ಕರ್ನಾಟಕದ ಈ ಸುಧಾರಣಾ ಅನುಭವವು ಇತರೆ ರಾಜ್ಯಗಳಿಗೆ ಅನುಕರಣೀಯ ಮಾದರಿಯಾಗಿದೆ. ಸುಧಾರಣೆ ಕ್ರಮಗಳಿಗೆ ಕಟಿಬದ್ಧನಾಗಿರುವ ನಾನು ಮುಂಬರುವ ವರ್ಷದಲ್ಲಿ ರಾಜಸ್ವ ಉಳಿಕೆ ಸಾಧಿಸುವ ನಿರೀಕ್ಷೆಯನ್ನಿಟ್ಟುಕೊಂಡಿದ್ದೇನೆ. ಇದು ನಮ್ಮ ವಿತ್ತೀಯ ಕಾರ್ಯಸಾಧನೆಯ ಫಲಶೃತಿಯಾಗಿದೆ.

20. ಅಬಕಾರಿ ಬಾಬಿನಲ್ಲಿ ತೆರಿಗೆ ವಂಚನೆಯ ಪಿಡುಗನ್ನು ನಿವಾರಿಸಿ ಹಲವಾರು ಸುಧಾರಣೆಗಳನ್ನು ತಂದಿರುವುದು ವಿತ್ತೀಯ ನಿರ್ವಹಣೆಯಲ್ಲಿ ನನ್ನ ವಿಶೇಷ ಪ್ರಯತ್ನವಾಗಿದೆ. ನನ್ನ ಸರ್ಕಾರವು ಎಲ್ಲ ಮಾದರಿಯ ಛಾಪಾ ಕಾಗದಗಳ ಬಳಕೆಯನ್ನು ನಿಷೇಧಿಸುವ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಅಲ್ಲದೆ ನನ್ನ ಸರ್ಕಾರವು ಕೈಗೆತ್ತಿಕೊಂಡಿರುವ ಅಬಕಾರಿ ಸುಧಾರಣಾ ಕ್ರಮಗಳು ಜುಲೈ ಮತ್ತು ಡಿಸೆಂಬರ್ 2003ರ ನಡುವೆ ಕೇವಲ ಆರು ತಿಂಗಳಲ್ಲಿ **300 ಕೋಟಿ** ರೂ.ಗಳ ಹೆಚ್ಚುವರಿ ಸಂಪನ್ಮೂಲ ರೂಢಿಸಿವೆ. ಈ ಅಭೂತಪೂರ್ವ ಯಶಸ್ಸನ್ನು ನಾನು ಅತೀವ ಹೆಮ್ಮೆಯಿಂದ ಸದನದ ಮುಂದಿಡುತ್ತಿದ್ದೇನೆ. ಈ ವರ್ಷದಲ್ಲಿ ನನ್ನ ಸರ್ಕಾರದ ರಾಜಸ್ವವು ಶೇ. 15 ಕ್ಕೂ ಹೆಚ್ಚಿನ ಬೆಳವಣಿಗೆಯನ್ನು ಬಿಂಬಿಸುತ್ತಿದೆ. ವಾಣಿಜ್ಯ ತೆರಿಗೆ ರಾಜಸ್ವದಲ್ಲಿ ಡಿಸೆಂಬರ್ 2003ರ ಅಂತ್ಯದವರೆಗೆ ಶೇ.21 ರಷ್ಟು ಹೆಚ್ಚಳವಾಗಿದ್ದು ಇದು ಇಡೀ ರಾಷ್ಟ್ರದಲ್ಲಿಯೇ ಅತ್ಯಂತ

ಹೆಚ್ಚು ಪ್ರಮಾಣದ್ದಾಗಿದೆ. ಅಬಕಾರಿ ಬಾಬಿನಲ್ಲಿ ನಾನು ಮತ್ತಷ್ಟು ಸುಧಾರಣೆಗಳನ್ನು ಮುಂದುವರಿಸಲು ಉದ್ದೇಶಿಸಿದ್ದು ಆದಾಯ ಸೋರಿಕೆಯನ್ನು ತಡೆಗಟ್ಟಲು ಮತ್ತಷ್ಟು ಕ್ರಮಗಳನ್ನು ಕೈಗೊಳ್ಳಲಿದ್ದೇನೆ. ಈ ನಿಟ್ಟಿನಲ್ಲಿ ಸಾರಾಯಿ ತಯಾರಿಕೆಯನ್ನು ಮುಕ್ತಗೊಳಿಸಲು ಉದ್ದೇಶಿಸಿದ್ದು ಈ ಚಟುವಟಿಕೆಯನ್ನು ಕೈಗೊಳ್ಳಲು ಪ್ರಾಥಮಿಕ ಡಿಸ್ಟಿಲರಿಗಳಿಗೂ ಸಹ ಅವಕಾಶ ಮಾಡಲಾಗುವುದು. ಆದಾಗ್ಯೂ ಬಹಳಷ್ಟು ರೈತರು ಮೈಶುಗರ್ ಕಾರ್ಖಾನೆಯನ್ನು ಅವಲಂಬಿಸಿರುವುದರಿಂದ ಇದಕ್ಕೆ ಸೂಕ್ತ ಪರಿಹಾರ ಒದಗಿಸಿ ಈ ನಿಟ್ಟಿನಲ್ಲಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

21. ಆರ್ಥಿಕ ಸುಧಾರಣೆಗಳಿಗೆ ಸಂಬಂಧಿಸಿದಂತೆ 1,200 ಕೋಟಿ ರೂ.ಗಳ ವಿಶ್ವಬ್ಯಾಂಕ್ ಸಾಲದ ಬಿಡುಗಡೆ ವಿಷಯದಲ್ಲಿ ಕೇಂದ್ರ ಸರ್ಕಾರವು ಅನುಸರಿಸಿದ ಮಲತಾಯಿ ಧೋರಣೆ ನನ್ನನ್ನು ವ್ಯಥೆಗೀಡುಮಾಡಿದೆ. ರಾಜ್ಯದ ಸುಧಾರಣಾ ಪ್ರಯತ್ನಗಳ ಮೌಲ್ಯ ಮಾಪನ ಮಾಡಿದ ವಿಶ್ವಬ್ಯಾಂಕ್, ಕರ್ನಾಟಕಕ್ಕೆ ಸಾಲ ಮಂಜೂರು ಮಾಡಲು ಶಿಫಾರಸ್ಸು ಮಾಡಿತ್ತು. ಅಲ್ಲದೆ ಭಾರತ ಸರ್ಕಾರದ ವಿತ್ತ ಸಚಿವಾಲಯದ ಜೊತೆ ಸಮಾಲೋಚಿಸಿ ಸಾಲದ ಬಗ್ಗೆ ಮಾತುಕತೆಗಳ ದಿನಾಂಕವನ್ನು ಸಹ ನಿಗದಿಪಡಿಸಿತ್ತು. ಆದರೆ, ಕೇಂದ್ರ ಸರ್ಕಾರವು ಈ ಮಾತುಕತೆಗಳನ್ನು ರದ್ದುಪಡಿಸಿತು. ಈ ಸಂಬಂಧ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಮಾಧಾನಕರ ಉತ್ತರ ಇನ್ನೂ ಬರಬೇಕಾಗಿದೆ. ಆದರೆ ಇದೇ ರೀತಿಯ ಪರಿಸ್ಥಿತಿಯಲ್ಲಿದ್ದ ಇನ್ನೊಂದು ರಾಜ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ವಿಶೇಷ ಆಸಕ್ತಿ ವಹಿಸಿ ವಿಶ್ವಬ್ಯಾಂಕ್ ಸಾಲದ ಮಂಜೂರಾತಿಗೆ ಸಹಾಯ ಮಾಡಿದೆ.

22. ನಮ್ಮ ವಿತ್ತೀಯ ಸಾಧನೆಗಳು 2001-02ನೇ ಸಾಲಿನಲ್ಲಿ ನಿಗದಿತ ಮಟ್ಟದಲ್ಲಿರಲಿಲ್ಲ ಎಂದು ಕೇಂದ್ರವು ಹೇಳಿದೆ. ಆದರೆ ಆ ವರ್ಷದಲ್ಲಿ ಭೀಕರ ಬರಗಾಲದಿಂದ ರಾಜ್ಯವು ತೊಂದರೆಗೊಳಗಾಗಿದ್ದು ನೆರವಿಗಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಆದರೆ ನಮ್ಮ ಮನವಿಯನ್ನು ಕೇಂದ್ರವು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಇನ್ನೂ ಅನ್ಯಾಯವೆಂದರೆ; ಇದೇ ಕಾರಣದ ಮೇಲೆ ಕರ್ನಾಟಕವು ಎರಡು ಬಾರಿ ಶಿಕ್ಷೆಗೊಳಗಾಯಿತು. 2001-02ರ ಬರಗಾಲದ ಕೊರತೆಯನ್ನು ಭರಿಸಲು ನಾವು 2002-03 ರಲ್ಲಿ ಕೋರಿದ್ದ ವಿಶ್ವಬ್ಯಾಂಕ್ ಸಾಲವನ್ನು ಬಿಡುಗಡೆ ಮಾಡಲಿಲ್ಲ ಇದನ್ನು ನಾವು ವಿಶಾಲ ಮನೋಭಾವದಿಂದ ಒಪ್ಪಿಕೊಂಡೆವು. ಆದರೆ ಮತ್ತೆ 2003-04 ರಲ್ಲಿ ಮಾಡಿರುವ ಸಾಲ ನಿರಾಕರಣೆಯು ಕರ್ನಾಟಕವನ್ನು ದುಪ್ಪಟ್ಟು ಅಪಾಯಕ್ಕೆ ದೂಡಿದೆ. ಈ ತಾರತಮ್ಯ ನೀತಿಯನ್ನು ಕರ್ನಾಟಕದ ಜನತೆಯೇ ಅರ್ಥೈಸಿಕೊಳ್ಳಬೇಕು.

23. ಈ ಸಾಲ ನಿರಾಕರಣೆಯಿಂದ ಕರ್ನಾಟಕ ರಾಜ್ಯಕ್ಕೆ ತೀವ್ರ ವಿತ್ತೀಯ ಒತ್ತಡ ಉಂಟಾಗಿರುವುದರ ಜೊತೆಗೆ ಸುಧಾರಣಾ ಪ್ರಕ್ರಿಯೆಗಳಿಗೂ ಸಹ ಧಕ್ಕೆ ಯುಂಟಾಗಿದೆ. ಇದು ಭಾರತದ ಅತ್ಯಂತ ಪ್ರಗತಿಪರ ರಾಜ್ಯವಾದ ಕರ್ನಾಟಕಕ್ಕೆ ನ್ಯಾಯಬದ್ಧ ಹಕ್ಕನ್ನೇ ನಿರಾಕರಿಸಿದಂತಾಗಿದೆ.

24. ಕರ್ನಾಟಕದ ವಿತ್ತೀಯ ಭವಿಷ್ಯದ ಬಗ್ಗೆ ನನ್ನ ನೋಟ ಹೀಗಿದೆ. ಆರ್ಥಿಕ ಬೆಳವಣಿಗೆಯನ್ನು ಏರಿಸಲು ಅನುಕೂಲವಾಗುವಂತೆ ತೆರಿಗೆ ಸ್ವರೂಪದ ಸುಧಾರಣೆ; ಖಾಸಗಿ ಪ್ರಭುತ್ವದ ಕ್ಷೇತ್ರಗಳಿಂದ ಹಿಂದೆ ಸರಿಕೆ; ಮಾರುಕಟ್ಟೆ ವೈಫಲ್ಯದ ಕ್ಷೇತ್ರಗಳಲ್ಲಿ ಗಮನ ಕೇಂದ್ರೀಕರಣ; ಸಾರ್ವಜನಿಕ ವೆಚ್ಚದ ಸುಧಾರಣೆ; ಮೂಲಸೌಕರ್ಯ ಮತ್ತು ಮಾನವ ಅಭಿವೃದ್ಧಿಗೆ ಸಂಪನ್ಮೂಲಗಳ ಬಿಡುಗಡೆ; ಇವುಗಳನ್ನು

ಸಾಧಿಸಲು ಅಂತರ್ಗತ ಸಹಾಯಧನಗಳ ರದ್ದತಿ; ಸರ್ಕಾರದ ಗಾತ್ರದಲ್ಲಿ ಕಡಿತ; ಮತ್ತು ಎತ್ತುವಳಿ ವೆಚ್ಚದಲ್ಲಿ ಕಡಿತದ ಅಗತ್ಯವಿದೆ. ನನ್ನ ಸರ್ಕಾರವು ಆರಂಭಿಸಿರುವ ಆರ್ಥಿಕ ಸುಧಾರಣೆಗಳನ್ನು ಮುಂದುವರಿಸಿ ಅದರ ಫಲವನ್ನು ನಾನು ಕ್ರೋಢೀಕರಿಸಲಿದ್ದೇನೆ.

25. ನಾನು ಗುಣಮಟ್ಟದ ಆಡಳಿತವನ್ನು ವೃದ್ಧಿಪಡಿಸುವುದರ ಪರವಾಗಿದ್ದೇನೆ. ಏಕೆಂದರೆ ನಾಗರೀಕರು ತಾವು ಸ್ವೀಕರಿಸುವ ಆಡಳಿತಕ್ಕೆ ಪಾವತಿಯನ್ನು ಮಾಡುತ್ತಾರೆ. ಆದ್ದರಿಂದ ನಾವು ಹೆಚ್ಚಿನ ಗುಣಮಟ್ಟದ ಆಡಳಿತವನ್ನು ನೀಡಿದ ನಂತರವೆ ಅದಕ್ಕೆ ಸೂಕ್ತವಾದ ವೆಚ್ಚಗಳನ್ನು ನಾಗರೀಕರಿಂದ ಪಡೆಯಲು ಕ್ರಮಕೈಗೊಳ್ಳಬೇಕು. ನಾನು ಪಿಂಚಣಿ ನಿಧಿ ಮತ್ತು ಸಿಬ್ಬಂದಿಗಳಿಗೆ ಸಂಬಂಧಿಸಿದ ವೆಚ್ಚ ಸುಧಾರಣೆಗಳನ್ನು ಅಳವಡಿಸಿಕೊಂಡು ನಾಗರೀಕರ ಮೇಲೆ ಹೇರುವ ಆಡಳಿತ ವೆಚ್ಚವನ್ನು ಕಡಿಮೆ ಮಾಡಲು ಉದ್ದೇಶಿಸಿದ್ದೇನೆ. ಪರಿಣಾಮಕಾರಿ ಮತ್ತು ಅಲ್ಪವೆಚ್ಚದ ಆಡಳಿತವನ್ನು ನೀಡಲು ಅನುಕೂಲವಾಗುವಂತೆ ಪುನರುಕ್ತಿ ಯಾಗುತ್ತಿರುವ ಆಡಳಿತಾತ್ಮಕ ಕಾರ್ಯಗಳನ್ನು, ಇಲಾಖೆಗಳನ್ನು ಮತ್ತು ಸಿಬ್ಬಂದಿಗಳನ್ನು ಸೂಕ್ತವಾಗಿ ಸಂಯೋಜಿಸುವುದು ನನ್ನ ಪ್ರಯತ್ನವಾಗಿದೆ.

ಕರ್ನಾಟಕದ ಮುನ್ನೋಟ

26. ಮುಂಬರುವ ವರ್ಷಗಳಲ್ಲಿ ಕರ್ನಾಟಕದ ಪ್ರಗತಿಯ ಮುನ್ನೋಟವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಾನು ಇಚ್ಛಿಸುತ್ತೇನೆ. ಈ ಮುನ್ನೋಟದ ಅಂತರಾಳದಲ್ಲಿ ನಮ್ಮ ರಾಜ್ಯದ ಎಲ್ಲ ಜನತೆಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಜೀವನ ಗುಣಮಟ್ಟವನ್ನು ಸುಧಾರಿಸುವ ಸ್ವಯಂಬದ್ಧತೆಯಿದೆ.

27. ಈ ಮುನ್ನೋಟದಲ್ಲಿ ಗ್ರಾಮೀಣ ನಾಗರೀಕರಿಗೆ ವಾಹನ ಸೌಲಭ್ಯವನ್ನುಳ್ಳ ರಸ್ತೆ ಸಂಪರ್ಕ, ಖಾತರಿಯಾದ ವಾಹನ ಸೌಕರ್ಯ, ಉತ್ತಮ ವಸತಿ, ಆಹ್ಲಾದಕರ ಪರಿಸರ, ಗುಣಮಟ್ಟದ ವಿದ್ಯುತ್ ಸರಬರಾಜು, ಜಮೀನಿನ ಮಟ್ಟದ ಮೈಕ್ರೋ ಇರಿಗೇಷನ್, ಮಕ್ಕಳಿಗೆ ಗುಣಮಟ್ಟದ ಶಾಲಾ ಶಿಕ್ಷಣ, ಕುಟುಂಬದ ಕೈಗೆಟುಕುವ ಆರೋಗ್ಯ ರಕ್ಷಣೆಗಳು ಖಾತರಿಯಾಗಿವೆ.

28. ಈ ಮುನ್ನೋಟವನ್ನು ನನಸಾಗಿಸಲು ನಾವೆಷ್ಟು ಹತ್ತಿರದಲ್ಲಿದ್ದೇವೆ? ಈ ಗೌರವಾನ್ವಿತ ಸದನದಲ್ಲಿ ನನ್ನ ಸರ್ಕಾರದ ಕೆಲವು ಸಾಧನೆಗಳನ್ನು ನಿಮ್ಮೊಡನೆ ಸಂಕ್ಷಿಪ್ತವಾಗಿ ಹಂಚಿಕೊಳ್ಳಲು ಬಯಸುತ್ತೇನೆ.

ಮಕ್ಕಳು : ನಮ್ಮ ಭವಿಷ್ಯ

29. ನನ್ನ ಹೃದಯಾಂತರಾಳಕ್ಕೆ ಹತ್ತಿರವಾದ ವಿಷಯಗಳಿಂದ ನಾನು ಆರಂಬಿಸುತ್ತೇನೆ. 'ನಮ್ಮ ಮಕ್ಕಳೇ ನಮ್ಮ ಭವಿಷ್ಯ' ಕರ್ನಾಟಕದ ಪ್ರತಿಯೊಂದು ಮಗುವನ್ನೂ ಶಾಲೆಗೆ ಕಳುಹಿಸಬೇಕೆಂಬುದು ನನ್ನ ಕನಸು. ಆದ್ದರಿಂದ ಸಹಜವಾಗಿಯೇ 'ಅಕ್ಷರ ದಾಸೋಹ' ಕಾರ್ಯಕ್ರಮವು ನನ್ನ ಸರ್ಕಾರದಲ್ಲಿ ಹೆಮ್ಮೆಯ ಸ್ಥಾನವನ್ನು ಗಳಿಸಿದೆ. ಸರ್ವಜ್ಞ ಕವಿ ಹೇಳಿರುವಂತೆ

"ಅನ್ನವನು ಇಕ್ಕುವುದು"
ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ
ಕೈಲಾಸ ಭಿನ್ನಾಣವಕ್ಕು ಸರ್ವಜ್ಞ"

ಇದೇ ಅಕ್ಷರ ದಾಸೋಹ ಯೋಜನೆಯ ಮೂಲ ಆಶಯ......

30. ನನ್ನ ಸರ್ಕಾರವು ಸುಮಾರು 44 ಲಕ್ಷಕ್ಕೂ ಹೆಚ್ಚು ಪ್ರಾಥಮಿಕ ಶಾಲಾ ಮಕ್ಕಳನ್ನು ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ತಂದಿದೆ. ಈ ಎಲ್ಲ ಮಕ್ಕಳ ಭವಿಷ್ಯ ದೀರ್ಘಾವಧಿಯಲ್ಲಿ ಹಸನಾಗಲಿದೆ ಎನ್ನುವುದು ನನ್ನ ನಂಬಿಕೆ.

31. ಮಕ್ಕಳನ್ನು ಮರಳಿ ಶಾಲೆಗೆ ತರುವ ಕಾರ್ಯಕ್ರಮ ಗಮನಾರ್ಹ ಪರಿಣಾಮ ಉಂಟು ಮಾಡಿದೆ. ಈಗಿನ ವರದಿಗಳ ಪ್ರಕಾರ ಪ್ರಾಥಮಿಕ ಶಾಲಾ ಮಕ್ಕಳ ಹಾಜರಾತಿಯಲ್ಲಿ ಸುಮಾರು ಒಂದು ಲಕ್ಷ ಏರಿಕೆಯಾಗಿದೆ.

32. ಅಕ್ಷರದಾಸೋಹದ ಅಭೂತಪೂರ್ವ ಯಶಸ್ಸಿನಿಂದ ನಾನು ಉತ್ಸಾಹಿತನಾಗಿದ್ದು ಈ ಯೋಜನೆಯನ್ನು 2004-05ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಏಳನೆಯ ತರಗತಿಯವರೆಗಿನ ಎಲ್ಲ ಮಕ್ಕಳಿಗೂ ವಿಸ್ತರಿಸಲು ಉದ್ದೇಶಿಸಿದ್ದೇನೆ.

33. ಇದರಿಂದ ಹೆಚ್ಚುವರಿಯಾಗಿ 16 ಲಕ್ಷ ಮಕ್ಕಳು ಅನುಕೂಲ ಪಡೆಯಲಿವೆ. ಮುಂಬರುವ ವರ್ಷದಲ್ಲಿ ಈ ಯೋಜನೆಯ ವಿಸ್ತರಣೆಗೆ ಅಗತ್ಯ ಕ್ರಮವನ್ನು ನಾನು ಕೈಗೊಳ್ಳಲಿದ್ದೇನೆ. ಇದಕ್ಕೆ ಅಗತ್ಯವಾದ ಆಹಾರ ಧಾನ್ಯವನ್ನು ಭಾರತ ಸರ್ಕಾರವು ಒದಗಿಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಕೇಂದ್ರ ಸರ್ಕಾರದ ನಿರ್ಣಯವೇನೇ ಇದ್ದರೂ ನಾನು ಈ ಯೋಜನೆಗೆ ಹೆಚ್ಚುವರಿಯಾಗಿ ಒಂದು ನೂರು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

34. ನಮ್ಮ ಗ್ರಾಮೀಣ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣದ ವ್ಯವಸ್ಥೆ ಕಲ್ಪಿಸಿ ಅವರಿಗೆ ಅವಕಾಶಗಳ ಹೆಬ್ಬಾಗಿಲನ್ನು ತೆರೆಯಲು ನಾನು ರಾಜ್ಯದ 27 ಜಿಲ್ಲೆಗಳಲ್ಲಿಯೂ ಒಂದೊಂದು "ಕುವೆಂಪು ಶತಮಾನೋತ್ಸವ ಮಾದರಿ ಕನ್ನಡ ಶಾಲೆ" ಯನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

35. ಈ ಶಾಲೆಗಳು ಉತ್ತಮ ಮೂಲಸೌಕರ್ಯ, ಪ್ರಯೋಗಶಾಲೆ ಮತ್ತು ಕಂಪ್ಯೂಟರ್ ಸೌಲಭ್ಯಗಳನ್ನು ಒಳಗೊಳ್ಳಲಿವೆ ಸಾರ್ವಜನಿಕ - ಖಾಸಗಿ ಸಹಭಾಗಿತ್ವದ ಮೂಲಕ ಇವುಗಳನ್ನು ಉತ್ತೇಜಿಸಲಾಗುವುದು. ಇವು ಗ್ರಾಮೀಣ ಮಕ್ಕಳಿಗೆ ಆಧುನಿಕ, ಜಾತ್ಯಾತೀತ ಮತ್ತು ವೈಜ್ಞಾನಿಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸುತ್ತವೆ. ಮಕ್ಕಳ ಮನಸ್ಸಿನಲ್ಲಿ ವಿಶ್ವಮಾನವ ಸಂದೇಶವನ್ನು ಬಿತ್ತಲು ಪ್ರಯತ್ನಿಸಲಾಗುವುದು. ಈ ಉದ್ದೇಶಕ್ಕಾಗಿ 2004-05ನೇ ಸಾಲಿನಲ್ಲಿ ನಾನು ಹತ್ತು ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

ಮಹಿಳಾ ಸಬಲೀಕರಣ

36. ಮಹಿಳಾ ಸಬಲೀಕರಣ ನನ್ನ ಸರ್ಕಾರದ ಮತ್ತೊಂದು ಮಹೋನ್ನತ ಆಶಯ. ಇದರ ಯಶಸ್ವಿ ಕಾರ್ಯಕ್ರಮವೇ 'ಸ್ತ್ರೀಶಕ್ತಿ', ಸ್ವಸಹಾಯ ತಂಡಗಳ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸಲಾಗುವುದು. ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯಸರ್ಕಾರವು 60 ಕೋಟಿ ರೂ.ಗಳ ನೆರವನ್ನು ನೀಡುವ ಮೂಲಕ ಒಂದು ಲಕ್ಷ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದೆ.

37. ಈ ತಂಡಗಳು ಒಟ್ಟಾರೆಯಾಗಿ ಸುಮಾರು 15 ಲಕ್ಷ ಕುಟುಂಬಗಳನ್ನು ಆವರಿಸಿಕೊಂಡಿವೆ. ಸ್ತ್ರೀಶಕ್ತಿ ತಂಡಗಳು ಯಶಸ್ಸಿನಿಂದ ಬೀಗುತ್ತಿದ್ದು 150 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಉಳಿತಾಯ ಮಾಡಿ ರಾಷ್ಟ್ರದ ಇತರೆ ರಾಜ್ಯಗಳಿಗೆ ಅನುಕರಣೀಯ ಮಾದರಿಗಳಾಗಿವೆ.

38. ಮೂವತ್ತೈದು ಸಾವಿರಕ್ಕೂ ಹೆಚ್ಚು ಸ್ತ್ರೀಶಕ್ತಿ ತಂಡಗಳು ಆದಾಯ ಉತ್ಪನ್ನ ಚಟುವಟಿಕೆಗಳಲ್ಲಿ ತೊಡಗಿದ್ದು ತಮ್ಮ ಸದಸ್ಯರುಗಳ ಆರ್ಥಿಕಮಟ್ಟ ಸುಧಾರಣೆಗೆ ಕಾರಣವಾಗಿವೆ.

39. ನನ್ನ ಸರ್ಕಾರವು ಮಹಿಳೆಯರನ್ನು ಸಬಲೀಕರಣಗೊಳಿಸುವತ್ತ ಈಗ ಮತ್ತೊಂದು ದಿಟ್ಟ ಹೆಜ್ಜೆಯನ್ನು ಇಡುತ್ತಿದೆ. ಸುಮಾರು ಹದಿನೈದು ಲಕ್ಷ ಸ್ತ್ರೀಶಕ್ತಿ ತಂಡಗಳು ಸ್ವಾವಲಂಬನೆ ಮತ್ತು ಗೌರವಯುತ ಜೀವನದ ಕಡೆಗೆ ಮುನ್ನಡೆಯುತ್ತಿವೆ. ಈ ಸ್ತ್ರೀಶಕ್ತಿ ಚಟುವಟಿಕೆಗಳಿಗೆ ಸಾಂಸ್ಥಿಕ ರೂಪ ಕೊಡಲು ಇದು ಸಕಾಲವಾಗಿದ್ದು ನಾನು 'ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್' ನ್ನು ಸ್ಥಾಪಿಸುತ್ತಿದ್ದೇನೆ. ಸ್ವಸಹಾಯ ತಂಡಗಳು ಮತ್ತು ಅದರ ಸದಸ್ಯರು ಈ ಬ್ಯಾಂಕ್‌ನ ಭಾಗೀದಾರರಾಗಿರುತ್ತಾರೆ. ಈ ಬ್ಯಾಂಕ್‌ಗೆ ಷೇರು ಬಂಡವಾಳವಾಗಿ ಪ್ರತೀ ಸ್ವಸಹಾಯ ತಂಡಕ್ಕೆ 5,000 ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

40. ಇದು ಉಳಿತಾಯ ಮನೋಭಾವಕ್ಕೆ ಮನ್ನಣೆ ನೀಡಿ, ಸಣ್ಣ ಪ್ರಮಾಣದ ಸಾಲ ವ್ಯವಸ್ಥೆಯನ್ನು ಉತ್ತೇಜಿಸಿ ಬೆಳವಣಿಗೆಗೆ ಉತ್ತಮ ವಾತಾವರಣ ಕಲ್ಪಿಸುತ್ತದೆ ಎಂದು ನಾನು ನಂಬಿದ್ದೇನೆ. ಸರ್ಕಾರದ ಬೆಂಬಲ ಮತ್ತು ಉತ್ತೇಜನಗಳಿಂದ ಇವು ದೀರ್ಘಾವಧಿಯಲ್ಲಿ ಕರ್ನಾಟಕದ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಕಾರಣವಾಗುತ್ತವೆ. ಈ ಉದ್ದೇಶಕ್ಕಾಗಿ ನಾನು ಐವತ್ತು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

41. ಗ್ರಾಮೀಣ ಪ್ರದೇಶದ ಮಹಿಳೆಯರ ಬದುಕು ಸಾಮಾನ್ಯವಾಗಿ ಪ್ರಯಾಸದ್ದಾಗಿರುತ್ತದೆ. ಗ್ರಾಮೀಣ -ನಗರ ಎನ್ನುವ ವಿಭಜನೆಯಡಿ ಗ್ರಾಮೀಣ ಮಹಿಳೆಯರಿಗೆ ಸಾಮಾನ್ಯವಾಗಿ ಸಂಪನ್ಮೂಲಗಳು ಸುಲಭವಾಗಿ ಲಭ್ಯವಾಗುವುದಿಲ್ಲ. ಅನುಕೂಲದ ಅಡುಗೆ ಇಂಧನ ಗ್ರಾಮೀಣ ಬಡ ಮಹಿಳೆಯರಿಗೆ ದೊರೆಯದೇ ಇರುವುದೇ ಇದಕ್ಕೆ ಒಂದು ಸ್ಪಷ್ಟ ಉದಾಹರಣೆ. ಗ್ರಾಮೀಣ ಕರ್ನಾಟಕದಲ್ಲಿ ಮಹಿಳೆಯರು ಉರುವಲಿಗಾಗಿ ಮೈಲಿಗಟ್ಟಲೆ ನಡೆಯುವುದು ಸಾಮಾನ್ಯ ದೃಶ್ಯ. ಈ ಸಾಂಪ್ರದಾಯಿಕ ಇಂಧನ ಮೂಲಗಳು ಪರಿಸರಕ್ಕೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆಗಳನ್ನು ಒಡ್ಡುತ್ತಿವೆ. ಆದರೂ ಸಹ ಉರುವಲಿನ ಹುಡುಕಾಟದಲ್ಲಿ ಮಹಿಳೆಯರ ಉತ್ಪಾದನಾ ಸಮಯ ವ್ಯರ್ಥವಾಗುತ್ತಿರುವುದು ಮತ್ತು ಅಡುಗೆ ಮನೆಯ ಹೊಗೆಯಿಂದ ಮಹಿಳೆಯರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ನಾವು ಗಮನಿಸಬೇಕಾಗಿದೆ. ಮಹಿಳೆಯರನ್ನು ಈ ತೊಂದರೆಗಳಿಂದ ಬಿಡುಗಡೆಗೊಳಿಸಲು ನಾನು 'ಇಂದಿರಾಜ್ಯೋತಿ' ಎನ್ನುವ ನೂತನ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದ್ದೇನೆ.

42. ಈ ಯೋಜನೆಯಡಿ, ಸ್ತ್ರೀಶಕ್ತಿ ತಂಡಗಳಿಗೆ ಸೇರಿದ 15 ಲಕ್ಷ ಕುಟುಂಬಗಳಿಗೆ ಮುಂದಿನ ಮೂರು ವರ್ಷಗಳಲ್ಲಿ ತಲಾ ಒಂದು ಅಡುಗೆ ಸಿಲಿಂಡರ್ ಮತ್ತು ಒಂದು ಬರ್ನರ್‌ನ ಒಲೆಯನ್ನು ಒದಗಿಸಲಾಗುವುದು. ಇದು ಒಂದು ಬಾರಿಯ ಶೇಕಡಾ 100ರ ಸಹಾಯಧನಕ್ಕೆ ಅರ್ಹವಾಗಿರುತ್ತದೆ. ನನ್ನ ದೃಷ್ಟಿಯಲ್ಲಿ ಇದು ಗ್ರಾಮೀಣ ಮಹಿಳೆಯರಿಗೆ ಸ್ವಚ್ಛ, ಅನುಕೂಲಕರ, ಸುರಕ್ಷತೆಯ ಪರಿಸರ ಸ್ನೇಹಿ ಅಡುಗೆ ಇಂಧನವನ್ನು ಒದಗಿಸುವ ಕ್ರಾಂತಿಕಾರಿ ಹೆಜ್ಜೆ. ಇದರಿಂದ ಒಟ್ಟಾರೆಯಾಗಿ ಗ್ರಾಮೀಣ ಜನತೆಯ ಮತ್ತು ವಿಶೇಷವಾಗಿ ಮಹಿಳೆಯರ ಜೀವನ ಗುಣಮಟ್ಟ ಸುಧಾರಿಸುತ್ತದೆ ಎನ್ನುವುದು ನನ್ನ ದೃಢವಾದ ನಂಬಿಕೆ. ಇದರಿಂದ ಹಲವಾರು ಪರಿಸರ ಸಂಬಂಧಿ ಪ್ರಶ್ನೆಗಳಿಗೂ ಸಹ ಉತ್ತರ ದೊರೆಯಲಿದೆ.

43. ನಾನು 2004-05ನೇ ಸಾಲಿನಲ್ಲಿ ಐದು ಲಕ್ಷ ಕುಟುಂಬಗಳನ್ನು 'ಇಂದಿರಾಜ್ಯೋತಿ' ಯೋಜನೆಯ ವ್ಯಾಪ್ತಿಗೆ ತರಲು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ ನಾನು 35 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. ಈ ಆರಂಭಿಕ ಪ್ರಯತ್ನಗಳು ಮುಂಬರುವ ದಿನಗಳಲ್ಲಿ ಗಮನಾರ್ಹ ಆರ್ಥಿಕ, ಸಾಮಾಜಿಕ ಮತ್ತು ಮಾನವ ಅಭಿವೃದ್ಧಿ ಚಟುವಟಿಕೆಗಳಿಗೆ ಚಾಲನೆ ನೀಡಲಿವೆ.

ಸರ್ವರಿಗೂ ಸೂರು

44. ಈ ಹಿಂದೆ ನಾನು ವಸತಿರಹಿತರೆಲ್ಲರಿಗೂ ವಸತಿ ಒದಗಿಸುತ್ತೇನೆ ಎಂದು ವಚನ ನೀಡಿದ್ದೆ. ನನ್ನ ಸರ್ಕಾರವು ಐದು ವರ್ಷಗಳಲ್ಲಿ 11 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯನ್ನು ಸಹ ನಿಗದಿಪಡಿಸಿತ್ತು. ಇದರಲ್ಲಿ ಈಗಾಗಲೇ ಎಂಟು ಲಕ್ಷದ ಐವತ್ತು ಸಾವಿರ ಮನೆಗಳನ್ನು ಸಂಪೂರ್ಣವಾಗಿ ನಿರ್ಮಿಸಲಾಗಿದೆ ಎಂದು ಸದನಕ್ಕೆ ತಿಳಿಸಲು ನನಗೆ ಸಂತಸವಾಗುತ್ತಿದೆ. ನಾವೀಗ ಸೆಪ್ಟೆಂಬರ್ 2004ರ ವೇಳೆಗೆ ನಿಗದಿತ 11 ಲಕ್ಷ ಮನೆಗಳ ಗುರಿಯನ್ನು ಸಾಧಿಸುವ ಹಾದಿಯಲ್ಲಿದ್ದೇವೆ. ರಾಜ್ಯದ ವಸತಿ ಕೊರತೆಯನ್ನು ನಾವು ಇನ್ನೊಂದು ವರ್ಷದಲ್ಲಿ ನಿವಾರಿಸಬಹುದಾಗಿದೆ. ಈ ಸಾಧನೆಯ ಗಮನಾರ್ಹ ಅಂಶವೇನೆಂದರೆ, ನಾವು ಹನ್ನೊಂದು ಲಕ್ಷ ಬಡ ಕುಟುಂಬಗಳ ತಲೆಯ ಮೇಲೆ ಬರಿಯ ಸೂರನ್ನು ಒದಗಿಸುತ್ತಿಲ್ಲ. ಇಷ್ಟು ಕುಟುಂಬಗಳ 50 ಲಕ್ಷ ಹತಭಾಗ್ಯ ಜನರ ಪಾಲಿಗೆ ಅತ್ಯಲ್ಪ ನಿರ್ವಹಣೆಯ **ಬಹುಬಾಳಿಕೆಯ ಆಸ್ತಿಗಳನ್ನು** ನಿರ್ಮಿಸಿ ಕೊಟ್ಟಿದ್ದೇವೆ. ಇದೊಂದು ಅಭೂತಪೂರ್ವ ಸಾಧನೆಯಾಗಿದೆ. ಸವಲತ್ತುಗಳನ್ನು ಸೃಷ್ಟಿಸುವುದರಲ್ಲಿ, ನಮ್ಮ ಬಡಜನತೆಯ ಸಾಮಾಜಿಕ - ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಫಲಕಾರಿಯಾಗಿವೆ ಎನ್ನುವ ಅಂಶವನ್ನು ನಾನು ಇಲ್ಲಿ ಒತ್ತಿ ಹೇಳುತ್ತೇನೆ.

ರೈತರಿಗೆ ಸಹಾಯ ಹಸ್ತ

45. ನೇಗಿಲಯೋಗಿಯ ಬಗ್ಗೆ ರಾಷ್ಟ್ರಕವಿ ಕುವೆಂಪುರವರ ಗೌರವಾದರಗಳು ಹೀಗಿವೆ.

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ

ಇಂತಹ ರೈತರ ನೆರವಿಗಾಗಿ ನನ್ನ ಸರ್ಕಾರವು ಸಹಾಯ ಹಸ್ತವನ್ನು ನೀಡುತ್ತಿದೆ.

46. ನನ್ನ ಸರ್ಕಾರದ ಮೂರು ವರ್ಷಗಳು ರಾಜ್ಯದಲ್ಲಿನ ಬರಗಾಲದ ವರ್ಷಗಳಾಗಿದ್ದವು. ಈ ಪ್ರಾಕೃತಿಕ ಸವಾಲುಗಳನ್ನು ಎದುರಿಸುವಲ್ಲಿ ಕರ್ನಾಟಕದ ಜನತೆ ಸಂಯಮ ಮತ್ತು ಸಾಹಸವನ್ನು ಪ್ರದರ್ಶಿಸಿದ್ದಾರೆ.

47. ನನ್ನ ಸರ್ಕಾರವೂ ಸಹ ತೀವ್ರ ಬರಗಾಲವನ್ನು ಎದುರಿಸುವ ಅಗಾಧ ಕಾರ್ಯವನ್ನು ದೃಢಸಂಕಲ್ಪದಿಂದ ನಿರ್ವಹಿಸಿದೆ.

48. ರಾಜ್ಯದ ಎಲ್ಲಾ ಪ್ರದೇಶಗಳಿಗೂ ಸಮರ್ಪಕ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು, ಜಾನುವಾರುಗಳಿಗೆ ಮೇವಿನ ಸೌಲಭ್ಯ ಕಲ್ಪಿಸುವುದು ಮತ್ತು ತೀವ್ರ ಬರಗಾಲಕ್ಕೆ ತುತ್ತಾದ ತಾಲ್ಲೂಕುಗಳಲ್ಲಿ ಉದ್ಯೋಗಾವಕಾಶ ನೀಡುವುದು, ಈಗ ನನ್ನ ಸರ್ಕಾರದ ಕೇಂದ್ರ

ಗಮನವಾಗಿದೆ. ಬರಪರಿಹಾರ ಕ್ರಮಗಳಿಗಾಗಿ ನನ್ನ ಸರ್ಕಾರವು ನಾಲ್ಕು ನೂರು ಕೋಟಿ ರೂ.ಗಳಿಗೂ ಅಧಿಕ ಹಣವನ್ನು ವೆಚ್ಚಮಾಡಿದೆ.

49. ಇದರ ಜೊತೆಗೆ ನನ್ನ ಸರ್ಕಾರವು ರೈತರಿಗಾಗಿ ಸುಮಾರು **880** ಕೋಟಿ ರೂ.ಗಳ ಗಣನೀಯ ಪ್ರಮಾಣದ ಪರಿಹಾರ ಪ್ಯಾಕೇಜ್‌ನ್ನು ಘೋಷಿಸಿದೆ. ಇದರಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ, ವಿದ್ಯುಚ್ಛಕ್ತಿ ಶುಲ್ಕ ಮನ್ನಾ, ಭೂಕಂದಾಯ ಮತ್ತು ನೀರಾವರಿ ದರಗಳು, ಬೀಜ ಮತ್ತು ಕೃಷಿ ಪೂರಕ ಸಾಮಗ್ರಿಗಳಿಗೆ ಸಹಾಯಧನ, ವಿಫಲಗೊಂಡ ಬಾವಿಗಳಿಗೆ ಪರಿಹಾರ ಧನ ಮತ್ತು ಕೃಷಿ ಸಾಲ ನೆರವು ಇವೆಲ್ಲವೂ ಸೇರಿವೆ.

50. ನನ್ನ ಸರ್ಕಾರವು ಬೆಳೆ ವಿಮೆಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ನಿಯತವಾಗಿ ರಾಜ್ಯಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಿದ್ದು ಹತಾಶ ಪರಿಸ್ಥಿತಿ ಉದ್ಭವಿಸಿದಾಗ ರೈತರು ತಮ್ಮ ಬೆಳೆಗೆ ಸೂಕ್ತ ಪರಿಹಾರವನ್ನು ಪಡೆದಿದ್ದಾರೆ. ರೈತರಿಗೆ ಸಂಬಂಧಿಸಿದಂತೆ ನಮ್ಮ ಅಂತಃಕರಣ ಮತ್ತು ಹತಾಶ ಜನತೆಯ ರಕ್ಷಣೆ ಮಾಡುವಲ್ಲಿ ಈಗ ನಾವು ನಡೆಸಿರುವ ಪ್ರಯತ್ನಗಳು ಹಿಂದೆಂದೂ ಆಗಿದ್ದಿಲ್ಲ. ಈ ಉದ್ದೇಶಕ್ಕಾಗಿ ಈ ವರ್ಷ **103** ಕೋಟಿ ರೂ.ಗಳನ್ನು ಒದಗಿಸಿದ್ದೇವೆ.

51. ನಮ್ಮ ರಾಜ್ಯದ ಸಾಗುವಳಿ ಜಮೀನಿನಲ್ಲಿ ಶೇ. 70 ರಷ್ಟು ಜಮೀನು ಮಳೆ ಆಧಾರಿತ ಒಣಬೇಸಾಯವನ್ನೇ ಅವಲಂಬಿಸಿದೆ. ಕೃಷಿ ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಕೃಷಿಯನ್ನು ಲಾಭಯೋಗ್ಯ ಮಾಡಲು ಮಧ್ಯಮಾವಧಿಯಲ್ಲಿ ಸುಸ್ಥಿರ ಪರಿಹಾರಗಳನ್ನು ಕಂಡುಹಿಡಿಯಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ.

52. ಪದೇ ಪದೇ ಕಾಡುತ್ತಿರುವ ಬರಗಾಲದ ಜೊತೆಗೆ ಅವೈಜ್ಞಾನಿಕ ಬೇಸಾಯ ಪದ್ಧತಿಗಳು ನಮ್ಮ ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡಿದ್ದು ಬೆಳೆ ಇಳುವರಿ ಕುಂಠಿತವಾಗಿದೆ. ಅಮೂಲ್ಯವಾದ ಅಂತರ್ಜಲ ಕುಸಿತಗೊಂಡಿದೆ. ಪ್ರಾಕೃತಿಕ ಹುಲ್ಲುಗಾವಲು ಕಣ್ಮರೆಯಾಗಿದೆ ಮತ್ತು ಜೈವಿಕ ಗೊಬ್ಬರದ ಉತ್ಪಾದನೆಯೂ ಸಹ ಕ್ಷೀಣಿಸಿದೆ.

53. ಕರ್ನಾಟಕದ ಕೃಷಿಯನ್ನು ಮುಂದಿನ ಐದು ವರ್ಷಗಳಲ್ಲಿ ರೈತರ ಕೃಷಿ ಕ್ಷೇತ್ರ ಮಟ್ಟದಲ್ಲಿ ಬರಗಾಲ ಎದುರಿಸುವ ಸುಸ್ಥಿರ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು ನನ್ನ ತಂತ್ರವಾಗಿದೆ. ಇದಕ್ಕಾಗಿ ಸಮಗ್ರವಾದ ಸೂಕ್ತ ತಂತ್ರಜ್ಞಾನವನ್ನು ಕ್ಷೇತ್ರ ಮಟ್ಟದಲ್ಲಿ ಅಳವಡಿಸಿ ಮಣ್ಣು ಮತ್ತು ನೀರನ್ನು ಸಂರಕ್ಷಿಸಿ ಪುನಶ್ಚೇತನಗೊಳಿಸಲು ನಾನು ಉದ್ದೇಶಿಸಿದ್ದೇನೆ.

54. ಉತ್ತಮ ತಂತ್ರಜ್ಞಾನ ಮತ್ತು ಅತ್ಯುತ್ತಮ ಜಮೀನು ನಿರ್ಮಾಣ ವಿಧಾನವನ್ನು ಬಳಸಿ ರೈತರನ್ನು ಸಬಲೀಕರಣಗೊಳಿಸುವುದು ನಮ್ಮ ಪ್ರಯತ್ನದ ಕೇಂದ್ರ ಬಿಂದುವಾಗಿದೆ. ಗರಿಷ್ಠ ಉತ್ಪಾದಕತೆಯನ್ನು ಪಡೆಯಲು ಅನುವಾಗುವಂತೆ ರೈತರಿಗೆ ಮಣ್ಣು, ನೀರು ಮತ್ತು ಜಾನುವಾರುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸೂಕ್ತ ನೆರವು ನೀಡಲಾಗುವುದು.

55. ಈ ನಿಟ್ಟಿನಲ್ಲಿ ನಾನು ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಈ ನಿಗಮವು ರಾಜ್ಯಾದ್ಯಂತ ಕ್ಷೇತ್ರ ಮಟ್ಟದಲ್ಲಿ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು ಅಗತ್ಯವಾದ ಕ್ರಿಯಾ ಯೋಜನೆಯನ್ನು ರಾಜ್ಯ ವ್ಯಾಪಿಯಾಗಿ ರೂಪಿಸಲಿದೆ. ಈ ಉದ್ದೇಶಕ್ಕಾಗಿ ಮುಂಬರುವ ವರ್ಷದಲ್ಲಿ ನಾನು ಒಂದು ನೂರು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಈ ಚಟುವಟಿಕೆಗಾಗಿ ನಾನು ಹನ್ನೆರಡನೇ ಹಣಕಾಸು ಆಯೋಗದ ನೆರವನ್ನು ಕೋರಿದ್ದೇನೆ.

56. ಅನಿಶ್ಚಿತ ಮಳೆ ಮತ್ತು ಅಂತರರಾಜ್ಯ ನದಿ ವಿವಾದಗಳ ತೊಂದರೆಯಿಂದ ರೈತರನ್ನು ರಕ್ಷಿಸಲು ಮಧ್ಯಮಾವಧಿಯಲ್ಲಿ ರೈತರನ್ನು ಸಂಪೂರ್ಣವಾಗಿ ವಿಮೆಗೆ ಒಳಪಡಿಸುವುದು ನನ್ನ ಆಶಯವಾಗಿದೆ. ಕೃಷಿ ಸಂಬಂಧಿತ ನಿಗಮಗಳಾದ ಕೆಎಐಸಿ, ಕರ್ನಾಟಕ ಬೀಜ ನಿಗಮ, ಕರ್ನಾಟಕ ಪ್ರೋಟೀನ್ಸ್, ಕರ್ನಾಟಕ ಆಗ್ರೋ ಕಾರ್ನ್ ಇವುಗಳ ಚಟುವಟಿಕೆಗಳನ್ನು ಉದ್ದೇಶಿತ ನಿಗಮದ ವ್ಯಾಪ್ತಿಗೆ ತರಲಾಗುವುದು.

57. ನಾವು ಈಗಾಗಲೇ ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳಿಗಾಗಿ ರಾಜ್ಯಾದ್ಯಂತ 14,000 ಕೋಟಿ ರೂ.ಗಳನ್ನು ಮೂರು ಜಲ ನಿಗಮಗಳ ಮೂಲಕ ತೊಡಗಿಸಿದ್ದೇವೆ. ನಾನು ಈಗ ನಮ್ಮ ಒತ್ತಾಸೆಯನ್ನು ಸಣ್ಣ ನೀರಾವರಿಗೆ ವರ್ಗಾಯಿಸಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೇರವಾಗಿ ಸಹಾಯ ಹಸ್ತಚಾಚಲು ಪ್ರಯತ್ನಿಸುತ್ತಿದ್ದೇನೆ. ಸಣ್ಣ ಬ್ಯಾರೇಜ್‌ಗಳು, ಒಡ್ಡುಗಳು, ಮತ್ತು ಸಣ್ಣ ನೀರಾವರಿ ಕೆರೆಗಳು ಸಣ್ಣ ರೈತರ ಆರ್ಥಿಕ ಸ್ಥಿತಿಯನ್ನು ಬದಲಿಸುವ ಸಾಮರ್ಥ್ಯ ಹೊಂದಿವೆ. ಇಂತಹ ಯೋಜನೆಗಳನ್ನು ಕಾರ್ಯಾಚರಣೆಗೊಳಿಸಲು ನಾನು ಕರ್ನಾಟಕ ಸಣ್ಣ ನೀರಾವರಿ ನಿಗಮವನ್ನು ರಚಿಸಲು ಉದ್ದೇಶಿಸಿದ್ದೇನೆ. ಈ ಉದ್ದೇಶಕ್ಕಾಗಿ ಮುಂದಿನ ವರ್ಷದಲ್ಲಿ ನಾನು **ಒಂದು ನೂರು ಕೋಟಿ** ರೂ.ಗಳನ್ನು ಒದಗಿಸುತ್ತಿದ್ದೇನೆ. ಕರ್ನಾಟಕ ಕರಾವಳಿ ಪ್ರಾಂತ್ಯವು ಅಪಾರ ಮಳೆಯ ಅನುಕೂಲ ಪಡೆದಿದ್ದು ಹೇರಳವಾಗಿ ನದಿ ನೀರಿನ ಸಂಪನ್ಮೂಲವನ್ನು ಹೊಂದಿದೆ. ಪಶ್ಚಿಮಕ್ಕೆ ಹರಿಯುವ ಕರಾವಳಿ ಪ್ರದೇಶದ ಈ ನದಿಗಳ ನೀರಿನ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಕರಾವಳಿ ಪ್ರದೇಶದ ಉದ್ಯಮಶೀಲ ಜನಸಮುದಾಯದ ಸಹಯೋಗದೊಂದಿಗೆ ಸಣ್ಣ ಪ್ರಮಾಣದ ಅಣೆಕಟ್ಟು ಮತ್ತು ಬ್ಯಾರೇಜುಗಳನ್ನು ಪಶ್ಚಿಮ ವಾಹಿನಿ ನೀರಾವರಿ ನಿಗಮ ಎನ್ನುವ ವಿಶೇಷ ಉದ್ದೇಶ ವಾಹಕದ ಮೂಲಕ ನಿರ್ಮಿಸಲು ಉದ್ದೇಶಿಸಿದ್ದೇನೆ.

58. ಪದೇ ಪದೇ ಕಾಡುತ್ತಿರುವ ಬರಗಾಲದಿಂದ ಅಂತರ್ಜಲ ಮಟ್ಟವು ಕೆಳಕ್ಕಿಳಿದಿದ್ದು ಕೃಷಿ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ. ಇದು ಸಣ್ಣ ಮತ್ತು ಅತಿಸಣ್ಣ ರೈತರ ಕೃಷಿ ಹೂಡಿಕೆಯ ವೆಚ್ಚ ಸಾಮರ್ಥ್ಯವನ್ನು ಸಹ ಕುಂದಿಸಿದೆ. ಇದರಿಂದ ನೀರಾವರಿ ಪಂಪ್‌ಸೆಟ್‌ನ ವಿದ್ಯುತ್ ವೆಚ್ಚವನ್ನು ಪಾವತಿಸಲು ಸಹ ರೈತರು ಅಸಮರ್ಥರಾಗಿದ್ದಾರೆ. ಈ ನಿಟ್ಟಿನಲ್ಲಿ ಅವರ ಕಷ್ಟವನ್ನು ಗುರುತಿಸಿ 'ಆಪದ್ಬಾಂಧವ' ನಾಗಿ ನನ್ನ ಸರ್ಕಾರವು ಮುಂದೆ ಬಂದು ಒಂದು ಅವಧಿಯ ಕ್ರಮವಾಗಿ 31-3-2003ರ ವರೆಗಿನ ನೀರಾವರಿ ಪಂಪ್‌ಸೆಟ್‌ನ ವಿದ್ಯುತ್ ಬಾಕಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿದೆ. ಇದರಿಂದ ರೈತರಿಗೆ ಸುಮಾರು 600 ಕೋಟಿ ರೂ.ಗಳ ಪರಿಹಾರ ದೊರಕಲಿದೆ.

59. ಕಳೆದ ನಾಲ್ಕು ವರ್ಷಗಳಲ್ಲಿ ಕಾಫಿ ಬೆಳೆಯ ಬೆಲೆ ಕುಸಿತದಲ್ಲೇ ಇದೆ. ಇದರ ಜೊತೆಗೆ ಪ್ರತಿಕೂಲ ಹವಾಮಾನ ಪರಿಸ್ಥಿತಿಯೂ ಸೇರಿ ಸಣ್ಣ ಪ್ರಮಾಣದ ಕಾಫಿ ಬೆಳೆಗಾರರು ತತ್ತರಿಸಿ ಹೋಗಿದ್ದಾರೆ. ಇವರನ್ನು ಹತಾಶ ಸ್ಥಿತಿಯಿಂದ ಮೇಲೆತ್ತಲು ನಾನು ಈಗಾಗಲೇ ಕಾಫಿ ಬೆಳೆಯ ಮೇಲಿನ ತೆರಿಗೆಯನ್ನು ಮೂರು ವರ್ಷಗಳಿಂದ ವಿನಾಯಿತಿಗೆ ಒಳಪಡಿಸಿದ್ದೇನೆ. ಇದು ನಮಗೆ ಸುಮಾರು ಅರವತ್ತಾರು ಕೋಟಿ ರೂ.ಗಳ ವೆಚ್ಚ ತಂದಿದೆ. ಈಗ ನಾನು ಸಣ್ಣ ಮತ್ತು ಅತಿ ಸಣ್ಣ ಕಾಫಿ ಬೆಳೆಗಾರರನ್ನು ಸಾಲದ ಬಾಧೆಯಿಂದ ಬಿಡಿಸಲು ವಸೂಲಿ ಆಧಾರಿತ ಬೆಳೆ ಸಾಲದ

ಬಡ್ಡಿ ಮನ್ನಾ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇನೆ. ಇದು ಕಾಫಿ ಬೆಳೆಗಾರರಿಗೆ ಮುವತ್ತಾರು ಕೋಟಿ ರೂ.ಗಳ ಪರಿಹಾರವನ್ನು ಒದಗಿಸಲಿದೆ.

60. ಅತಿ ಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರು ಆರೋಗ್ಯ ಹದಗೆಟ್ಟಾಗ ಚಿಕಿತ್ಸೆ ಪಡೆದುಕೊಳ್ಳಲು ಸಹ ಹಣವಿಲ್ಲದ ಪರಿಸ್ಥಿತಿಯಲ್ಲಿರುತ್ತಾರೆ. ಇಂತಹ ಕುಟುಂಬದಲ್ಲಿನ ಸಂಪಾದಿಸುವ ಮುಖ್ಯ ವ್ಯಕ್ತಿಯೇ ಆಕಸ್ಮಿಕ ಸಾವಿಗೆ ತುತ್ತಾದರೆ ಆ ಕುಟುಂಬ ಬೀದಿ ಪಾಲಾಗುತ್ತದೆ.

61. ರಾಜ್ಯ ಸರ್ಕಾರವು ಈ ಸಂಕಷ್ಟದಲ್ಲಿ ಮಧ್ಯ ಪ್ರವೇಶಿಸಿ ಈ ಜನರಿಗೆ ಸುರಕ್ಷತೆಯ ನೆರವನ್ನು ಒದಗಿಸಬೇಕಾಗಿದೆ. ಇದಕ್ಕಾಗಿ ಅತಿಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದ ವೈಯಕ್ತಿಕ ಅಪಘಾತ ವಿಮೆ 'ರೈತ ಸಂಜೀವಿನಿ'ಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ನಾನು ಉದ್ದೇಶಿಸಿದ್ದೇನೆ. ಈ ಯೋಜನೆಯಡಿ ಫಲಾನುಭವಿಗಳು ಆಕಸ್ಮಿಕ ಮರಣಕ್ಕೆ, ಮತ್ತು ಆಕಸ್ಮಿಕ ಅಂಗವಿಹಿನತೆಗೆ ಪರಿಹಾರ ಪಡೆಯಲು ಹಾಗೂ ಆಸ್ಪತ್ರೆ ವೆಚ್ಚವನ್ನು ಪಡೆಯಲು ಅರ್ಹತೆ ಹೊಂದಿರುತ್ತಾರೆ. ಸುಮಾರು ಒಂದು ಕೋಟಿ ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು ಮತ್ತು ಮೀನುಗಾರರಿಗೆ ಈ ಯೋಜನೆಯಡಿ ಸೌಲಭ್ಯ ದೊರೆಯಲಿದೆ. ಇದಕ್ಕಾಗಿ ಮುವತ್ತೈದು ಕೋಟಿ ರೂ.ಗಳ ವರೆಗೆ ವಿಮೆ ಹಣವನ್ನು ಸರ್ಕಾರದ ವತಿಯಿಂದ ಪಾವತಿಸಲಾಗುವುದು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ

62. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮತ್ತು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯದ ಸಣ್ಣ ಮತ್ತು ಅತಿ ಸಣ್ಣ ರೈತರು ಬರಗಾಲದ ಪರಿಸ್ಥಿತಿಯಲ್ಲಿ ತೀವ್ರ ತೊಂದರೆಗೆ ಒಳಗಾಗುತ್ತಾರೆ. ಗಂಗಾ ಕಲ್ಯಾಣ ಯೋಜನೆಯಡಿ ಇಂತಹ ರೈತರಿಗೆ ಕೊಳವೆ ಬಾವಿಯನ್ನು ಒದಗಿಸಲಾಗುತ್ತಿತ್ತು. ನನ್ನ ಕಳೆದ ಮುಂಗಡ ಪತ್ರದಲ್ಲಿ ಈ ಯೋಜನೆಯಡಿ ಹೆಚ್ಚುವರಿಯಾಗಿ ಐದು ಸಾವಿರ ಫಲಾನುಭವಿಗಳನ್ನು ಸೇರಿಸಲಾಗಿತ್ತು. ಆದರೂ ಈ ಸಂಖ್ಯಾ ಪ್ರಮಾಣ ನನಗೆ ಸಮಾಧಾನ ತರುತ್ತಿಲ್ಲ.

63. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯದ ರೈತರನ್ನು ಸ್ವಾವಲಂಬಿಗಳನ್ನಾಗಿಸಲು ನಾನು ಉದ್ದೇಶಿಸಿದ್ದೇನೆ. ಮುಂದಿನ ಐದು ವರ್ಷಗಳಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಐವತ್ತು ಸಾವಿರ ಫಲಾನುಭವಿಗಳನ್ನು ತರಬೇಕೆಂಬುದು ನನ್ನ ಯೋಜನೆಯಾಗಿದೆ. ಈ ಯೋಜನೆಯಡಿ ರೈತರ ಬಾವಿಯ ವಿದ್ಯುದ್ದೀಕರಣ ವೆಚ್ಚವನ್ನು ಸಹ ಸೇರಿಸಲು ನಾನು ಉದ್ದೇಶಿಸಿದ್ದೇನೆ. ನನ್ನ ಸರ್ಕಾರವು 2004-05 ರಲ್ಲಿ ಹತ್ತು ಸಾವಿರ ಫಲಾನುಭವಿಗಳನ್ನು ಈ ಯೋಜನೆಯಡಿ ತರಲು ಉದ್ದೇಶಿಸಿದೆ. ಇದಕ್ಕಾಗಿ ಎಪ್ಪತ್ತೈದು ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ.

64. ಗ್ರಾಮೀಣ ಪ್ರದೇಶದಲ್ಲಿ ವೈವಿಧ್ಯಮಯ ಗುಡಿಕಾರರು, ಕುಶಲಕರ್ಮಿಗಳು ಮತ್ತು ಬಹು ಸಂಖ್ಯೆಯಲ್ಲಿ ಸಾಂಪ್ರದಾಯಿಕ ವೃತ್ತಿದಾರರಿದ್ದು ಆರ್ಥಿಕ ಬೆಳವಣಿಗೆಯಲ್ಲಿ ಇವರ ಪಾಲು ಸಹ ಸಾಕಷ್ಟಿದೆ.

65. ಬಹುತೇಕ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ಸೇವೆ ಒದಗಿಸುವ ಅಗಸ, ಕುಂಬಾರ, ಗಾಣಿಗ, ಬಡಗಿ, ಸವಿತಾ ಸಮಾಜ ಇತ್ಯಾದಿ ಜನ ಸಮುದಾಯದವರು ಹಿಂದುಳಿದ ಜಾತಿಗೆ ಸೇರಿರುತ್ತಾರೆ. ತಾಂತ್ರೀಕರಣ ಮತ್ತು ಯಾಂತ್ರೀಕರಣದಿಂದಾಗಿ ಈ ಜನರು ತಮ್ಮ

ಸಾಂಪ್ರದಾಯಿಕ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಿರುವುದರ ಜೊತೆಗೆ ಕೆಲಸವೇ ಇಲ್ಲದ ಕಾರಣದಿಂದಾಗಿ ವೃತ್ತಿ ಕುಶಲತೆಯನ್ನು ಸಹ ಕಳೆದುಕೊಳ್ಳುತ್ತಿದ್ದಾರೆ.

66. ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಇವರನ್ನು ಸಮಗ್ರವಾಗಿ ತೊಡಗಿಸುವುದು ಅತ್ಯಗತ್ಯವಾಗಿದ್ದು ಇವರ ಕುಶಲತೆ ಮತ್ತು ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಲು ನಾವು ನೆರವಾಗಬೇಕು.

67. ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ವಿವಿಧ ಕಸಬುದಾರರುಗಳಿಗೆ ಲಾಭದಾಯಕವಾದ ಉದ್ಯಮವನ್ನು ಸ್ಥಾಪಿಸಲು ವ್ಯಕ್ತಿಗೆ ಅಥವಾ ಗುಂಪಿಗೆ ಅಂಚಿನ ಹಣವನ್ನು ನೀಡುವ ಉದ್ದೇಶದಿಂದ "ಶ್ರಮಶಕ್ತಿ" ಎನ್ನುವ ನೂತನ ಯೋಜನೆಯನ್ನು ಆರಂಭಿಸುತ್ತಿದ್ದೇನೆ.

68. ಈ ಯೋಜನೆಯಡಿ ಗ್ರಾಮೀಣ ಕುಶಲಕರ್ಮಿಗಳಿಗೆ ಅವರ ವೃತ್ತಿಗೆ ಸಂಬಂಧಿಸಿದ ಸರಕುಗಳನ್ನು ಖರೀದಿಸಲು ಅಥವಾ ತಾಂತ್ರಿಕತೆಯನ್ನು ಮೇಲ್ದರ್ಜೆಗೇರಿಸಿಕೊಳ್ಳಲು, ಕಾರ್ಯತಾಣಗಳನ್ನು ನಿರ್ಮಿಸಿಕೊಳ್ಳಲು, ವಿನ್ಯಾಸ ಸುಧಾರಿಸಿಕೊಳ್ಳಲು ಮತ್ತು ಮಾರುಕಟ್ಟೆ ಹುಡುಕಿಕೊಳ್ಳಲು ಐದು ಸಾವಿರ ರೂ.ಗಳ ಅಂಚಿನ ಹಣವನ್ನು ನೀಡಲಾಗುವುದು. ಈ ಯೋಜನೆಯಡಿ ಮುಂದಿನ ಐದು ವರ್ಷಗಳಲ್ಲಿ ಒಂದು ಲಕ್ಷ ಹಿಂದುಳಿದ ಜಾತಿಗೆ ಸೇರಿದ ಕುಶಲಕರ್ಮಿಗಳು ಮತ್ತು ಸೇವಾದಾರರಿಗೆ ನೆರವು ನೀಡಲು ಉದ್ದೇಶಿಸಲಾಗಿದೆ. 2004-05 ನೇ ಸಾಲಿನಲ್ಲಿ ಇಪ್ಪತ್ತು ಸಾವಿರ ಮಂದಿಗೆ ನೆರವು ನೀಡಲಾಗುವುದು. ಈ ಉದ್ದೇಶಕ್ಕಾಗಿ ಹತ್ತು ಕೋಟಿ ರೂಪಾಯಿಗಳನ್ನು ನಾನು ಒದಗಿಸುತ್ತಿದ್ದೇನೆ. ಹಿಂದುಳಿದ ವರ್ಗಗಳ ಆಯೋಗವು ವೃತ್ತಿಪರ ಕುಶಲಕರ್ಮಿಗಳ ಕುಶಲತೆ ಮತ್ತು ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸಲು ಸಾಧ್ಯವಾಗಬಹುದಾದ ಮಾಹಿತಿಯನ್ನು ಒದಗಿಸಲಿದೆ.

69. ಇದೇ ಮಾದರಿಯಲ್ಲಿ ಈ ರಾಷ್ಟ್ರದ ಅಲ್ಪಸಂಖ್ಯಾತರನ್ನು ಸಹ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ತೊಡಗಿಸಲು ರಾಜ್ಯ ಸರ್ಕಾರದ ಬೆಂಬಲದ ಅಗತ್ಯವಿದೆ. ಆಧುನಿಕ ಆರ್ಥಿಕತೆಯ ಬೇಡಿಕೆಗೆ ಅನುಗುಣವಾಗಿ ಉದ್ಯಮಶೀಲತೆ ಮತ್ತು ಪರಿಣಿತಿಯನ್ನು ಮೇಲ್ದರ್ಜೆಗೇರಿಸಲು ದುರ್ಬಲ ವರ್ಗಕ್ಕೆ ಸೇರಿದ ಅಲ್ಪಸಂಖ್ಯಾತ ಸಮುದಾಯದ ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತ ಮಹಿಳೆಯರಿಗೆ ನೆರವು ಒದಗಿಸಬೇಕಾಗಿದೆ.

70. ಈ ಉದ್ದೇಶಕ್ಕಾಗಿ ನಾನು ಹೆಚ್ಚುವರಿಯಾಗಿ ಹತ್ತು ಕೋಟಿ ರೂಪಾಯಿಗಳನ್ನು ಮೀಸಲಿಡುತ್ತಿದ್ದು ರಾಜ್ಯದ ಅಲ್ಪಸಂಖ್ಯಾತರಿಗೆ ಉದ್ಯಮಶೀಲತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಅಂಚಿನ ಹಣದ ಬೆಂಬಲ ಒದಗಿಸಲಾಗುವುದು. ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮವು ಈ ಯೋಜನೆಯನ್ನು ಜಾರಿಗೊಳಿಸಲಿದೆ. ಅಲ್ಪಸಂಖ್ಯಾತರ ಆಯೋಗವು ಈ ಯೋಜನೆಯ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಅಲ್ಪಸಂಖ್ಯಾತ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಕುಶಲತೆಗಳ ಬಗ್ಗೆ ಅಧ್ಯಯನ ಮಾಡಿ ಸೂಕ್ತ ಯೋಜನೆಗಳನ್ನು ರೂಪಿಸಲು ಸಹಕರಿಸಲಿದೆ.

71. ಕರ್ನಾಟಕದ ಕರಾವಳಿ ತೀರವು ವ್ಯಾಪಕ ಮೀನುಗಾರಿಕೆ ಉದ್ಯಮಕ್ಕೆ ಬೆಂಬಲವನ್ನು ಒದಗಿಸುತ್ತಿದೆ. ಕರಾವಳಿ ತೀರದ ಬಹುಸಂಖ್ಯಾತ ಜನರು ಮೀನುಗಾರಿಕೆ ಉದ್ಯಮವನ್ನು ತಮ್ಮ ಪ್ರಾಥಮಿಕ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ.

72. ಕರಾವಳಿ ಪ್ರದೇಶದ ಬಡಜನರು ಅಪಾರ ಉದ್ಯಮಶೀಲರು. ಅದರಲ್ಲಿಯೂ ಇಲ್ಲಿನ ಮಹಿಳಾ ಮೀನುಗಾರರು ಸಂಪರ್ಕವೇ ಇಲ್ಲದ ದೂರದ ಹಿನ್ನೀರಿನ ಪ್ರದೇಶಗಳಿಗೆ ಮೀನುಗಳನ್ನು ಮಾರಲು ತೆರಳುತ್ತಾರೆ.

73. ಸ್ಥಳೀಯ ಮೀನು ಮಾರುಕಟ್ಟೆಯನ್ನು ಆಧುನೀಕರಣಗೊಳಿಸುವ ಅಗತ್ಯವಿದ್ದು ಇದಕ್ಕಾಗಿ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಮಹಿಳಾ ಮೀನುಗಾರರಿಗೆ ಅಂಚಿನ ಹಣದ ಬೆಂಬಲವನ್ನು ಒದಗಿಸಲಾಗುವುದು.

74. ಈ ಯೋಜನೆಯ ವ್ಯಾಪ್ತಿಗೆ ಇಪ್ಪತ್ತು ಸಾವಿರ ಮಹಿಳಾ ಮೀನುಗಾರರನ್ನು ತರಲು ಉದ್ದೇಶಿಸಿದ್ದು ಪ್ರತಿಯೊಬ್ಬರಿಗೂ ಐದು ಸಾವಿರ ರೂಪಾಯಿಗಳ ಅಂಚಿನ ಹಣವನ್ನು ನೀಡಲಾಗುವುದು. ಈ ಉದ್ದೇಶಕ್ಕಾಗಿ ನಾನು ಹತ್ತು ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇನೆ.

75. ಮುಂದಿನ ಐದು ವರ್ಷಗಳಲ್ಲಿ ರಾಜ್ಯದ ನೇಕಾರರಿಗೆ ಪರಿಹಾರ ಒದಗಿಸಲು ನನ್ನ ಸರ್ಕಾರವು ನೂರ ಐದು ಕೋಟಿ ರೂಪಾಯಿಗಳ ಸಮಗ್ರ ನೇಕಾರರ ಪ್ಯಾಕೇಜನ್ನು ಘೋಷಿಸಿದೆ. ಈ ಪ್ಯಾಕೇಜ್‌ನಲ್ಲಿ ಆರೋಗ್ಯ ವಿಮೆ, ಪಿಂಚಣಿ, ಮೂಲಸೌಕರ್ಯಗಳ ಬೆಂಬಲ, ಮಾರುಕಟ್ಟೆ ಬೆಂಬಲ, ಸಾಲದ ನೆರವು ಇವೆಲ್ಲವೂ ಸೇರಿವೆ. ಈ ಪ್ಯಾಕೇಜ್ ನೇಕಾರ ಸಮುದಾಯಕ್ಕೆ ನೆಮ್ಮದಿ ತರಲಿದೆ ಎನ್ನುವ ವಿಶ್ವಾಸ ನನಗಿದೆ. ಈ ಉದ್ದೇಶಕ್ಕಾಗಿ ಮುಂದಿನ ವರ್ಷದಲ್ಲಿ ಇಪ್ಪತ್ತು ಕೋಟಿ ರೂಪಾಯಿಗಳನ್ನು ನಾನು ಮೀಸಲಿಡುತ್ತಿದ್ದೇನೆ.

ಯುವ ಕರ್ನಾಟಕ ನಿರ್ಮಾಣ

76. ನಮ್ಮ ರಾಷ್ಟ್ರದ ಯುವಕರು ಹಲವಾರು ಐತಿಹಾಸಿಕ ಸಂದರ್ಭಗಳಲ್ಲಿ ನಿರ್ಣಾಯಕ ಮತ್ತು ಪ್ರಧಾನ ಪಾತ್ರವನ್ನು ವಹಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವ ಯುವಕರ ಕ್ರಿಯಾಶೀಲತೆ ಮತ್ತು ಉತ್ಪಾದಕತಾ ಶಕ್ತಿಯನ್ನು ಅಭಿವೃದ್ಧಿಯ ಮುಖ್ಯ ವಾಹಿನಿಗೆ ತರುವುದು ಅಗತ್ಯವಿದೆ. ರಾಜ್ಯದ ಯುವಕರನ್ನು ಸಂಘಟಿಸಲು ಅನುಕೂಲವಾಗುವಂತೆ ಕಳೆದ ವರ್ಷ ನಾನು 'ರಾಜೀವ್ ಯುವಶಕ್ತಿ' ಎನ್ನುವ ಕಾರ್ಯಕ್ರಮವನ್ನು ಆರಂಭಿಸಿದ್ದೆ.

77. ರಾಷ್ಟ್ರ ನಿರ್ಮಾಣ ಮತ್ತು ಸಮುದಾಯ ರಕ್ಷಣೆಯ ಕಾರ್ಯದಲ್ಲಿ ಗ್ರಾಮೀಣ ಯುವಜನರನ್ನು ಉತ್ತೇಜಿಸಲು ನಾನು ರಾಜೀವ್ ಯುವಶಕ್ತಿ ಕಾರ್ಯಕ್ರಮವನ್ನು 2004-05 ರಲ್ಲಿ ವಿಸ್ತರಿಸುತ್ತಿದ್ದೇನೆ. ರಾಜ್ಯದ 5652 ಗ್ರಾಮ ಪಂಚಾಯಿತಿಗಳಲ್ಲಿ ತಲಾ ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರಾಜೀವ್‌ಗಾಂಧಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಕೀರ್ಣವನ್ನು ನಾವು ನಿರ್ಮಿಸಲಿದ್ದೇವೆ. ಈ ಸಂಕೀರ್ಣಕ್ಕೆ ಅಗತ್ಯವಾದ ಜಮೀನನ್ನು ಕೊಡುಗೆಯಾಗಿ ನೀಡುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳನ್ನು ಕೋರಲಾಗುವುದು. ಈ ಸಂಕೀರ್ಣಕ್ಕೆ ರಾಜ್ಯ ಸರ್ಕಾರವು ಆಧುನಿಕ ಕ್ರೀಡಾ ಸೌಲಭ್ಯಗಳನ್ನು ಒದಗಿಸುತ್ತದೆ. ಈ ಉದ್ದೇಶಕ್ಕಾಗಿ ಮುಂದಿನ ವರ್ಷದಲ್ಲಿ ನಾನು ಐವತ್ತಾರು ಕೋಟಿ ರೂಪಾಯಿಗಳನ್ನು ನೀಡಲಿದ್ದೇನೆ.

78. ಕರ್ನಾಟಕವು ವಿಶ್ವಮಟ್ಟದ ಕ್ರೀಡಾಪಟುಗಳನ್ನು ಕೊಡುಗೆಯಾಗಿ ನೀಡಿದೆ. ಇದು ಕ್ರಿಕೆಟ್‌ಗಷ್ಟೇ ಸೀಮಿತವಾಗಿಲ್ಲ. ಹಾಕಿ, ಫುಟ್‌ಬಾಲ್, ಈಜು, ಕಬಡ್ಡಿ, ಖೋಖೋ, ಬ್ಯಾಡ್‌ಮಿಂಟನ್ ಇತ್ಯಾದಿ ಕ್ರೀಡೆಗಳಲ್ಲಿಯೂ ಕರ್ನಾಟಕದ ಕೊಡುಗೆ ಇದೆ. ಗ್ರಾಮೀಣ ಕರ್ನಾಟಕದಲ್ಲಿ ವಿಶ್ವದರ್ಜೆಗೇರಬಲ್ಲ ಸಾಮರ್ಥ್ಯವುಳ್ಳ ನೂರಾರು ಮಂದಿ ಕ್ರೀಡಾಳುಗಳು ಇದ್ದಾರೆ

ಎಂಬುದು ನನ್ನ ನಂಬಿಕೆ. ಇವರ ಭವಿಷ್ಯಕ್ಕೆ ಮನ್ನಣೆ ನೀಡಲು ಮುಂಬರುವ ವರ್ಷದಲ್ಲಿ ಜಿಲ್ಲಾ ವಾರ್ಷಿಕ ಕ್ರೀಡಾ ಪ್ರಶಸ್ತಿಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ.

79. ಕರ್ನಾಟಕವು ಸೈನ್ಯ ಪರಂಪರೆಯಲ್ಲಿ ಭವ್ಯ ಇತಿಹಾಸವನ್ನು ಹೊಂದಿದೆ. ಫೀಲ್ಡ್ ಮಾರ್ಷಲ್ ಕಾರಿಯಪ್ಪನವರು, ಜನರಲ್ ತಿಮ್ಮಯ್ಯನವರು ರಾಜ್ಯಕ್ಕೆ ಕೀರ್ತಿ ತಂದ ವೀರ ಸೇನಾನಿಗಳಾಗಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಯುವಕರು ಭಾರತೀಯ ಸೈನ್ಯದಲ್ಲಿನ ಉದ್ಯೋಗ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ಇದಕ್ಕಾಗಿ ಸೈನ್ಯಕ್ಕೆ ಸೇರುವ ಆಕಾಂಕ್ಷಿಗಳಿಗೆ ತರಬೇತಿ ನೀಡಲು ನಾನು ರಾಜ್ಯದ ಪೊಲೀಸ್ ತರಬೇತಿ ಕಾಲೇಜುಗಳಲ್ಲಿ ಮತ್ತು ಎರಡು ಸೈನಿಕ ಶಾಲೆಗಳಲ್ಲಿ ನೇಮಕ ಪೂರ್ವ ತರಬೇತಿ ಕೋರ್ಸುಗಳನ್ನು ಆರಂಭಿಸಲು ಉದ್ದೇಶಿಸುತ್ತಿದ್ದೇನೆ. ಈ ಉದ್ದೇಶಕ್ಕಾಗಿ ಮಾಜಿ ಸೈನಿಕರ ನೆರವನ್ನು ಪಡೆದುಕೊಳ್ಳಲಾಗುವುದು. ಇದಕ್ಕಾಗಿ ನಾನು ಎರಡು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

80. ಗ್ರಾಮೀಣ ಯುವ ಜನತೆಗೆ ಹೊಸ ಉದ್ಯೋಗ ಅವಕಾಶಗಳನ್ನು ಒದಗಿಸಲು ನಾನು 'ಗ್ರಾಮ ವಿದ್ಯುತ್ ಪ್ರತಿನಿಧಿ ಯೋಜನೆ'ಯನ್ನು ಆರಂಭಿಸಲು ಉದ್ದೇಶಿಸಿದ್ದೇನೆ. ಈ ಯೋಜನೆಯಡಿ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯುವಜನತೆಗೆ ಮೀಟರ್ ಓದುವ, ಬಿಲ್ ವಸೂಲಾತಿ ಮಾಡುವ ಮತ್ತು ಸಣ್ಣ ಪುಟ್ಟ ವಿದ್ಯುತ್ ದುರಸ್ತಿಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ವಹಿಸಲಾಗುವುದು. ವಸೂಲಿ ಮಾಡಿದ ಶುಲ್ಕದಲ್ಲಿ ನಿಗದಿತ ಸಂಭಾವನೆಯನ್ನು ಪಡೆಯಲು ಇವರು ಅರ್ಹರಾಗಿರುತ್ತಾರೆ. ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿರುವ ಈ ಯೋಜನೆಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ವಿಸ್ತರಿಸಲಾಗುವುದು.

81. ನನ್ನ ಸರ್ಕಾರವು ಹಲವಾರು ವಲಯಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮಾದರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದೆ. ಗ್ರಾಮೀಣ ಯುವಜನತೆಗೆ ಉದ್ಯೋಗ ಅವಕಾಶ ಕಲ್ಪಿಸಲು ಈ ಮಾದರಿಯನ್ನು ವಿಸ್ತರಿಸಲು ನಾನು ಬಯಸಿದ್ದೇನೆ. ಸರ್ಕಾರದ ಆಸ್ತಿಯನ್ನು ಪ್ರಗತಿದಾಯಕವಾಗಿ ಬಳಸಿಕೊಳ್ಳಲು ಅನುಕೂಲವಾಗುವಂತೆ ಸರ್ಕಾರಿ ಒಡೆತನದಲ್ಲಿರುವ 50,000 ಎಕರೆಯಷ್ಟು ವಿಸ್ತೀರ್ಣದ ಸುಮಾರು 600 ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಫಾರಂಗಳನ್ನು ಉದ್ಯಮಶೀಲ ನಿರುದ್ಯೋಗಿ ಯುವಕರಿಗೆ ವೈಯಕ್ತಿಕವಾಗಿ ಅಥವಾ ಗುಂಪುಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುವುದು. ಇದರಲ್ಲಿ ಶೇಕಡಾ 25 ರಷ್ಟನ್ನು ಪರಿಶಿಷ್ಟ ಜಾತಿ, ವರ್ಗಕ್ಕೆ ಮತ್ತು ಶೇಕಡಾ 25 ರಷ್ಟನ್ನು ಹಿಂದುಳಿದ ವರ್ಗದವರಿಗೆ ಮೀಸಲಿಡಲಾಗುವುದು. ಇದು ಈ ನಿರುದ್ಯೋಗಿಗಳ ಆರ್ಥಿಕ ಸುಧಾರಿಸಲಿದೆ. ಈಗ ಇರುವ ಸರ್ಕಾರಿ ಯೋಜನೆಗಳಡಿಯಲ್ಲಿ ಹಾಗೂ ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮದ ಮೂಲಕ ಸಹಾಯ ನೀಡಲಾಗುವುದು.

ಜನರತ್ತ ಆಡಳಿತ

82. ನಮ್ಮ ಗ್ರಾಮೀಣ ಜನತೆಯನ್ನು ಅಭಿವೃದ್ಧಿಯಲ್ಲಿ ಸಕ್ರಿಯಗೊಳಿಸುವುದು, ಭವಿಷ್ಯ ಕರ್ನಾಟಕದ ನಿರ್ಮಾಣದಲ್ಲಿ ಪ್ರಮುಖ ಸವಾಲಾಗಿದೆ. ಈ ನಿಟ್ಟಿನಲ್ಲಿ ಜನತೆಯನ್ನು ಸಬಲೀಕರಣಗೊಳಿಸಲು ಹಾಗೂ ಗ್ರಾಮ ಪಂಚಾಯಿತಿಗಳನ್ನು ಸದೃಢಗೊಳಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತಿದೆ.

83. ನನ್ನ ಸರ್ಕಾರವು ಕಳೆದ ನಾಲ್ಕು ವರ್ಷಗಳಲ್ಲಿ 5,652 ಗ್ರಾಮ ಪಂಚಾಯತಿಗಳ ತಲಾ ವಾರ್ಷಿಕ ಅನುದಾನವನ್ನು ಒಂದು ಲಕ್ಷ ರೂ.ಗಳಿಂದ ಐದು ಲಕ್ಷ ರೂ.ಗಳಿಗೆ ಏರಿಸಿದೆ. ನನ್ನ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಮತ್ತಷ್ಟು ಬಲಗೊಳಿಸಲು ಉದ್ದೇಶಿಸುತ್ತಿದೆ.

84. ರಾಜ್ಯಸರ್ಕಾರ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಇತ್ತೀಚಿಗೆ ಜಂಟಿಯಾಗಿ ಘೋಷಿಸಿದ 'ಬೇಲೂರು ಘೋಷಣೆ' ಯ ರೀತ್ಯಾ ನಾವು ಸ್ಥಳೀಯ ಸರ್ಕಾರಗಳನ್ನು ಮತ್ತಷ್ಟು ಸಬಲಗೊಳಿಸಿ ನಾಗರೀಕರಿಗೆ ಉತ್ತಮ ಆಡಳಿತವನ್ನು ನೀಡಲಿದ್ದೇವೆ. ಈ ಸಂಬಂಧ ಸ್ಥಳೀಯ ಸರ್ಕಾರಗಳಿಗೆ ಹೆಚ್ಚು ಆಡಳಿತಾತ್ಮಕ ಮತ್ತು ಆರ್ಥಿಕ ಸ್ವಾಯತ್ತತೆ ಹಾಗೂ ಹೆಚ್ಚು ಜವಾಬ್ದಾರಿ ಮತ್ತು ಕಾರ್ಯಚಟುವಟಿಕೆಗಳನ್ನು ನೀಡಲಾಗುವುದು.

ಸಮಾಜದ ಕೃತಜ್ಞತೆ

85. ಜೀವನದ ಸಂಧ್ಯಾಕಾಲದಲ್ಲಿರುವ ಹಿರಿಯ ನಾಗರೀಕರಿಗೆ ನೆಮ್ಮದಿಯ ಜೀವನ ನಡೆಸಲು ಬೆಂಬಲಿಸಬೇಕು. ಹಿರಿಯ ನಾಗರೀಕರ ಬಗ್ಗೆ ನಮ್ಮ ಸರ್ಕಾರಕ್ಕಿರುವ ಕಾಳಜಿಯ ಪ್ರತೀಕವಾಗಿ ನಾನು ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ ಮತ್ತು ಬೆಳಗಾಂನಲ್ಲಿ ಹಿರಿಯ ನಾಗರೀಕರಿಗಾಗಿ ತಲಾ ಒಂದು 'ನೆಮ್ಮದಿಯ ತಾಣ'ಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ರಾಜ್ಯದ ಎಲ್ಲಾ ಆರು ನಗರ ಪಾಲಿಕೆ ಸ್ಥಳಗಳಲ್ಲಿ ವೃದ್ಧಾಪ್ಯ ಸಂಚಾರಿ ಚಿಕಿತ್ಸಾ ಕೇಂದ್ರ ಮತ್ತು ಪೊಲೀಸ್ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಿದ್ದೇನೆ. ಸ್ವಾತಂತ್ರ್ಯ ಹೋರಾಟಗಾರರಿಗೆ ನಮ್ಮ ಕೃತಜ್ಞತೆಯ ಕುರುಹಾಗಿ ಕೇಂದ್ರ ಸರ್ಕಾರದಿಂದ ತಾಮ್ರಪತ್ರ ಪಡೆದಿರುವವರ ಮಾಸಿಕ ಪಿಂಚಣಿಯನ್ನು 1200 ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ. ಇದಕ್ಕಾಗಿ ನಾನು ಐದು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

ಬೆಳವಣಿಗೆಗಾಗಿ ಮೂಲ ಸೌಕರ್ಯ

86. ರಸ್ತೆ ಸಂಪರ್ಕಗಳು ಯಾವುದೇ ಆರ್ಥಿಕ ವ್ಯವಸ್ಥೆಯ ಜೀವನಾಡಿಗಳು. ಹೀಗಾಗಿ ರಸ್ತೆ ಮೂಲ ಸೌಕರ್ಯದ ಸುಧಾರಣೆ ನನ್ನ ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ಸುಮಾರು 3,500 ಕಿ.ಮೀ. ಗಳಷ್ಟು ರಾಜ್ಯ ಹೆದ್ದಾರಿಯನ್ನು ಮರು ಡಾಂಬರೀಕರಣ ಮಾಡಲಾಗಿದೆ. ಉತ್ತರ ಕರ್ನಾಟಕ ಭಾಗದ 2,300 ಕಿ.ಮೀ. ರಾಜ್ಯ ಹೆದ್ದಾರಿಯನ್ನು ಸುಧಾರಿಸಲು ವಿಶ್ವಬ್ಯಾಂಕ್ ನೆರವಿನೊಂದಿಗೆ ಸಮಗ್ರ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. 2,000 ಕಿ.ಮೀ.ಗೂ ಹೆಚ್ಚು ಗ್ರಾಮೀಣ ರಸ್ತೆಯನ್ನು ನಬಾರ್ಡ್ ನೆರವಿನಿಂದ ಅಭಿವೃದ್ಧಿಪಡಿಸಲಾಗಿದೆ. ಬೆಂಗಳೂರು-ಮೈಸೂರು ನಡುವಣ ನಾಲ್ಕು ಪಥಗಳ ರಾಜ್ಯ ಹೆದ್ದಾರಿಯ ಕಾಮಗಾರಿಯು ಈ ವರ್ಷ ಆರಂಭವಾಗಿದ್ದು ಮುಂದಿನ 18 ತಿಂಗಳಲ್ಲಿ ಇದು ಪೂರ್ಣಗೊಳ್ಳಲಿದೆ.

87. ನನ್ನ ಹಿಂದಿನ ಮುಂಗಡ ಪತ್ರದಲ್ಲಿ ಹೇಳಿರುವಂತೆ ನಾನು ಈಗಾಗಲೇ ಗ್ರಾಮೀಣ ರಸ್ತೆ ನಿಧಿಯನ್ನು ಸ್ಥಾಪಿಸಿದ್ದೇನೆ. ಈ ನಿಧಿಯನ್ನು ಸುಮಾರು ಒಂದು ಲಕ್ಷ ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳು, ಇತರೆ ಜಿಲ್ಲಾ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳನ್ನು ನಿರ್ವಹಿಸಲು ಮತ್ತು ಮೇಲ್ದರ್ಜೆಗೆ ಏರಿಸಲು ಬಳಸಿಕೊಳ್ಳಲಾಗುವುದು. ಇದರಿಂದ ಗ್ರಾಮ ಮತ್ತು ನಗರ ಎನ್ನುವ ವಿಭಜನೆ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಡಿಮೆಯಾಗಲಿದೆ. ಅಲ್ಲದೆ ಗ್ರಾಮೀಣ ರಸ್ತೆ ಸಂಪರ್ಕ ಸುಧಾರಣೆಗೊಂಡು ದೀರ್ಘಾವಧಿಯಲ್ಲಿ ಇದು ರಾಜ್ಯದ ಆರ್ಥಿಕ ಸುಧಾರಣೆಗೆ ನೆರವಾಗಲಿದೆ.

88. ರಸ್ತೆ ಕರ ಮತ್ತು ಈ ಮುಂಚಿನ ಮೂಲಸೌಕರ್ಯ ಕರವನ್ನು ಬಹುತೇಕ ಎಲ್ಲ ವಸ್ತುಗಳ ಮೇಲೆ ಹೇರಲಾಗಿತ್ತು. ಸಾಮಾನ್ಯ ಜನರಿಗೆ ಹೊರೆಯಾಗದಂತೆ, ಬಹುಜನರು ಬಳಸುವ ವಸ್ತುಗಳು, ಡೀಸಲ್ ಮತ್ತು ಪೆಟ್ರೋಲ್‌ಗಳನ್ನು ನಾನು ಈಗಾಗಲೇ ಈ ಕರದಿಂದ ವಿನಾಯಿತಿಗೆ ಒಳಪಡಿಸಿದ್ದೇನೆ. ಇದು ಸುಮಾರು 400 ಕೋಟಿ ರೂ.ಗಳ ಪರಿಹಾರವನ್ನು ಕರ್ನಾಟಕದ ನಾಗರೀಕರಿಗೆ ಒದಗಿಸಿದೆ.

89. ಕಳೆದ ಒಂದು ದಶಕದಲ್ಲಿ ಬೆಂಗಳೂರು ಸುತ್ತಮುತ್ತಲಿನ ಸ್ಥಳೀಯ ಸಂಸ್ಥೆಗಳು ಅಪಾರ ಬೆಳವಣಿಗೆ ಕಂಡಿವೆ. ನಗರೀಕರಣದ ವೇಗಕ್ಕೆ ತಕ್ಕಂತೆ ಇಲ್ಲಿನ ಮೂಲಸೌಕರ್ಯಗಳ ಸೇವೆಗಳನ್ನು ಮೇಲ್ದರ್ಜೆಗೇರಿಸುವ ಅಗತ್ಯವಿದೆ. ಆದ್ದರಿಂದ ನನ್ನ ಸರ್ಕಾರವು ಬೃಹತ್ ಬೆಂಗಳೂರು ನೀರು ಮತ್ತು ನೈರ್ಮಲ್ಯ ಯೋಜನೆಯನ್ನು ಜಾರಿಗೊಳಿಸಿ ಈ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಿಗೆ ನೀರು ಮತ್ತು ನೈರ್ಮಲ್ಯ ಸೇವೆಯನ್ನು ಒದಗಿಸಲಿದೆ. ಈ ವಿನೂತನ ಯೋಜನೆಗೆ ಸಂಪನ್ಮೂಲವನ್ನು, ಫಲಾನುಭವಿಯ ಬಂಡವಾಳ ಕೊಡುಗೆ, ರಾಜ್ಯಸರ್ಕಾರದ ಅನುದಾನ ಮತ್ತು ಸರ್ಕಾರದ ಖಾತರಿ ಇಲ್ಲದ ಮಾರುಕಟ್ಟೆಯಲ್ಲಿನ ಎತ್ತುವಳಿಗಳ ಮೂಲಕ ಕ್ರೋಢೀಕರಿಸಲಾಗುವುದು. ಈ ಯೋಜನೆಯನ್ನು ಬಿಡಬ್ಲ್ಯೂಎಸ್‌ಎಸ್‌ಬಿ ಅನುಷ್ಠಾನಗೊಳಿಸಲಿದ್ದು ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಖಾಸಗಿ ವಲಯಕ್ಕೆ ನೀಡಲಾಗುವುದು. ಈ ಯೋಜನೆಯು ಬೃಹತ್ ಬೆಂಗಳೂರು ಪ್ರದೇಶದ 1.2 ದಶಲಕ್ಷ ಜನರಿಗೆ ಅತ್ಯುತ್ತಮ ಗುಣಮಟ್ಟದ ನೀರು ಸರಬರಾಜು ಮಾಡಲಿದೆ. ಈ ಉದ್ದೇಶಕ್ಕಾಗಿ ನಾನು 30 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

90. ಕರ್ನಾಟಕವು ಭವ್ಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಪರಂಪರೆಯ ಪ್ರವಾಸೋದ್ಯಮವು ಹೆಚ್ಚಿನ ಆಕರ್ಷಣೆಯನ್ನು ಪಡೆದಿದೆ. ಕರ್ನಾಟಕಕ್ಕೆ ಗಣನೀಯ ಪ್ರಮಾಣದಲ್ಲಿ ಬರುತ್ತಿರುವ ಪ್ರವಾಸಿಗರ ಸಂಖ್ಯೆಯೇ ಇದಕ್ಕೆ ಸಾಕ್ಷಿಯಾಗಿದೆ.

91. ಕರ್ನಾಟಕದ ಪರಂಪರೆಯ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡಲು ನಾನು ಮೈಸೂರು, ಹಂಪೆ, ಬಿಜಾಪುರ ಮತ್ತು ಗುಲ್ಬರ್ಗಾಗಳಲ್ಲಿ ನಾಲ್ಕು ಹೊಸ ವಿಮಾನ ಇಳಿದಾಣಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ. ಅಕ್ಟೋಬರ್ 2004ರ ವೇಳೆಗೆ ಅಂದರೆ ಮುಂದಿನ ದಸರಾ ಹಬ್ಬಕ್ಕೆ ಮುಂಚೆ ಮೈಸೂರಿನ ವಿಮಾನ ಇಳಿದಾಣವು ಕಾರ್ಯಾರಂಭ ಮಾಡಲಿದೆ. ಈ ಉದ್ದೇಶಕ್ಕಾಗಿ ನಾನು ಐದು ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

92. ಕಡಲ ಕೊರೆತ-ಕರಾವಳಿ ಪ್ರದೇಶದ ನಿರಂತರ ಸಮಸ್ಯೆ. ಕಡಲ ಕೊರೆತವನ್ನು ತಡೆಗಟ್ಟಲು ನನ್ನ ಸರ್ಕಾರವು ಹಾನಿಯಾಗಿರುವ ಪ್ರದೇಶಗಳಲ್ಲಿ ಕಡಲ ತಡೆಗೋಡೆಗಳನ್ನು ನಿರ್ಮಿಸಿದೆ. ಈ ನಿಟ್ಟಿನಲ್ಲಿ ಹೊಸತಂತ್ರಜ್ಞಾನವನ್ನು ಅಳವಡಿಸುವ ಅಗತ್ಯವಿದೆ. ಕಡಲ ಕೊರೆತವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ ನಾನು ಹತ್ತು ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

ಸಮತೋಲಿತ ಅಭಿವೃದ್ಧಿ

93. ಉತ್ತರ ಮತ್ತು ದಕ್ಷಿಣ ಕರ್ನಾಟಕಗಳ ಸಮಗ್ರ ಸಮಾನ ಅಭಿವೃದ್ಧಿಗಾಗಿ ನಾನು ನನ್ನ ಹಿಂದಿನ ಮುಂಗಡಪತ್ರಗಳಲ್ಲಿ ಪ್ರಯತ್ನ ಪಡುತ್ತಲೇ ಬಂದಿದ್ದೇನೆ. ಉತ್ತರ ಕರ್ನಾಟಕದಲ್ಲಿಯೂ ಸಹ ಹೆಚ್ಚು ಆದಾಯ ರೂಢಣೆಯಾಗುವಂತಹ ಚಟುವಟಿಕೆಗಳಿಗೆ ಉತ್ತೇಜನ ನೀಡಿ ಸಂಪನ್ಮೂಲದ ನಿವ್ವಳ ವರ್ಗಾವಣೆಯ ಸಮಸ್ಯೆಯನ್ನು ನಿವಾರಿಸಬಹುದಾಗಿದೆ. ನಂಜುಂಡಪ್ಪ ಸಮಿತಿಯ ವರದಿಯು

ರಾಜ್ಯಾದ್ಯಂತ ಅಭಿವೃದ್ಧಿಯ ಅಂತರವನ್ನು ಮೈಕ್ರೋ ಮಟ್ಟದಲ್ಲಿ ಗುರುತಿಸಿದೆ. ಬೇಲೂರು ಘೋಷಣೆಯಲ್ಲಿ ಹೇಳಿರುವಂತೆ ಇದನ್ನು ನಾವು ಅಳವಡಿಸಿಕೊಂಡಿದ್ದು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಅನುಷ್ಠಾನ ಗೊಳಿಸಲಾಗುವುದು. ಮುಂಬರುವ ವರ್ಷಗಳಲ್ಲಿ ಉತ್ತರ ಕರ್ನಾಟಕದ ತೊಂದರೆಗಳನ್ನು ಸಮರ್ಥವಾಗಿ ಎದುರಿಸಲು ಸಾಂಸ್ಥಿಕ ಸ್ವರೂಪದ ಮೂಲಕ ಪ್ರಯತ್ನಿಸಲಾಗುವುದು.

94. ನನ್ನ ಹಿಂದಿನ ಮುಂಗಡ ಪತ್ರದಲ್ಲಿ ವಚನ ನೀಡಿದಂತೆ ನನ್ನ ಸರ್ಕಾರವು ಈಗಾಗಲೇ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಹುಬ್ಬಳ್ಳಿ ದಾರವಾಡದಲ್ಲಿ ಪ್ರತ್ಯೇಕ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯವನ್ನು ಸ್ಥಾಪಿಸಿದೆ. ಬೀದರ್‌ನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ನಾನು ಉತ್ತರ ಕರ್ನಾಟಕದಲ್ಲಿ ಈಗಾಗಲೇ ಅಭಿವೃದ್ಧಿ ಆಯುಕ್ತರ ಹುದ್ದೆಯನ್ನು ಸೃಷ್ಟಿಸಿದ್ದೇನೆ. ಗುಲ್ಬರ್ಗ ವಿಭಾಗಕ್ಕೆ ಪ್ರತ್ಯೇಕ ನೀರು ಸರಬರಾಜು ಮಂಡಳಿಯನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಗುಲ್ಬರ್ಗಾ ಪ್ರಾಂತ್ಯಕ್ಕೆ ಕೂಡ ಪ್ರತ್ಯೇಕವಾದ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯವನ್ನು ಸ್ಥಾಪಿಸಲಾಗಿದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಪುನರ್‌ರಚಿಸಿ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ಎಂದು ಹೆಸರಿಸಲಾಗುವುದು. ಇದಕ್ಕೆ ಉತ್ತರ ಕರ್ನಾಟಕದ ಅಭಿವೃದ್ಧಿ ಆಯುಕ್ತರನ್ನೇ ಇದರ ಅಧ್ಯಕ್ಷರನ್ನಾಗಿ ನೇಮಿಸಲಾಗುವುದು. ಇದಕ್ಕಾಗಿ ಮೊದಲ ವರ್ಷ ನಾನು ಐದು ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಇತರೆ ಅಭಿವೃದ್ಧಿ ಮಂಡಳಿಗಳನ್ನು ವಿಸರ್ಜಿಸಲಾಗುವುದು.

ವಾರ್ಷಿಕ ಯೋಜನೆ 2004-05

95. ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2003-04 (ಪರಿಷ್ಕೃತ ಅಂದಾಜು)ರ **10083.51 ಕೋಟಿ** ರೂ.ಗಳಿಂದ 2004-05 (ಮುಂಗಡ ಅಂದಾಜು) ರಲ್ಲಿ **10904.23 ಕೋಟಿ** ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ಶೇ.8.14 ರಷ್ಟು ಹೆಚ್ಚಳವಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

96. 2004-05ನೇ ಸಾಲಿಗೆ ನಾನು ಯಾವುದೇ ರೀತಿಯ ಹೊಸ ತೆರಿಗೆಗಳನ್ನು ಪ್ರಸ್ತಾವಿಸುತ್ತಿಲ್ಲ.

97. ಆದಾಗ್ಯೂ ತೆರಿಗೆಯೇತರ ರಾಜಸ್ವದ ಬಗ್ಗೆ ಅದರಲ್ಲೂ ವಿಶೇಷವಾಗಿ ಲಾಟರಿಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಇಚ್ಚಿಸುತ್ತಿದ್ದೇನೆ.

98. ಲಾಟರಿ ಮತ್ತು ಇತರೆ ಜೂಜಿನ ಕ್ರೀಡೆಗಳು ಕೇಂದ್ರ ಕಾಯಿದೆಗಳಡಿಯಲ್ಲಿ ಬರುತ್ತವೆ. ನಿಯಂತ್ರಣವಿಲ್ಲದ ಲಾಟರಿಗಳು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ಇದು ಸದನದ ಗೌರವಾನ್ವಿತ ಸದಸ್ಯರ ಗಮನಕ್ಕೂ ಬಂದಿದೆ. ಪ್ರತಿಯೊಬ್ಬ ನಾಗರೀಕನೂ ಜವಾಬ್ದಾರಿಯುತವಾಗಿ ತನ್ನ ನೈತಿಕ ಸಂಹಿತೆಗೆ ಒಳಗಾಗಿ ನಡೆದುಕೊಳ್ಳಬೇಕು. ಜನರ ಆಯ್ಕೆಯ ಸ್ವಾತಂತ್ರ್ಯವನ್ನು ಹತ್ತಿಕ್ಕದೆ ಎಲ್ಲಾ ಮಾದರಿಯ ಲಾಟರಿಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ನಾಗರೀಕರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ ಎಂಬುದನ್ನು ನಾನು ದೃಢವಾಗಿ ನಂಬಿದ್ದೇನೆ.

99. ಅತಿಯಾದ ಲಾಟರಿ ಡ್ರಾಗಳನ್ನು ನಿರುತ್ಸಾಹಗೊಳಿಸುವಂತಹ ಷರತ್ತುಗಳನ್ನು ಒಳಗೊಂಡಿರುವ ಕರ್ನಾಟಕ ಬೆಟ್ಟಿಂಗ್ ಟ್ಯಾಕ್ಸ್ ಆನ್ ಲಾಟರೀಸ್ ಆಕ್ಟ್‌ನ್ನು ಸರ್ಕಾರವು

ಜಾರಿಗೊಳಿಸಿದೆ. ಈ ಕಾಯಿದೆಯು ಬಲವಾದ ನಿಯಂತ್ರಣ ಅಂಶಗಳನ್ನು ಒಳಗೊಂಡಿದ್ದು ನೋಂದಾಯಿತ ಲಾಟರಿ ಸಂಸ್ಥೆಗಳು ಮಾತ್ರ ರಾಜ್ಯದಲ್ಲಿ ಸಾಮಾಜಿಕ ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುತ್ತಿದೆ. ಇದರ ಪರಿಣಾಮವು ಉತ್ತೇಜಕಾರಿಯಾಗಿದ್ದು ಕೇವಲ ಎರಡು ತಿಂಗಳಲ್ಲಿ ಸಾಪ್ತಾಹಿಕ ಡ್ರಾಗಳ ಸಂಖ್ಯೆ 250 ರಿಂದ 50 ಕ್ಕೆ ಕುಸಿದಿದೆ. ಹಲವಾರು ಲಾಟರಿ ಸಂಸ್ಥೆಗಳು ತಮ್ಮ ಅಂಗಡಿ ಮುಚ್ಚಿಕೊಂಡು ಹೋಗಿವೆ.

100. ಕಾಯಿದೆಯ ಯಾವುದೇ ಅಂಶವನ್ನು ಉಲ್ಲಂಘಿಸಿ ಲಾಟರಿ ನಡೆಸುವ ಸಂಸ್ಥೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರವು ಕಟಿಬದ್ಧವಾಗಿದೆ. ಕರ್ನಾಟಕದಲ್ಲಿ ಲಾಟರಿಗಳು ಮುಂದುವರಿಯಬೇಕಾದರೆ ಅವು ಈ ನೆಲದ ಕಾಯಿದೆಯನ್ವಯ ಕಾರ್ಯಾಚರಣೆ ನಡೆಸಬೇಕಾಗುತ್ತದೆ. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಕಾನೂನು ಬಾಹಿರ ಇಂಟರ್‌ನೆಟ್ ಲಾಟರಿಗಳನ್ನು ಕೊನೆಗಾಣಿಸಲು ಕ್ರಮ ಕೈಗೊಂಡಿರುತ್ತೇನೆ.

ಪರಿಷ್ಕೃತ ಅಂದಾಜುಗಳು 2003-04

101. 2003-2004 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು **26907.08 ಕೋಟಿ** ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು **30069.82 ಕೋಟಿ** ರೂ.ಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು **30541.16 ಕೋಟಿ** ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು **26839.42 ಕೋಟಿ** ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದಲ್ಲಿನ ಹೆಚ್ಚುವರಿಯನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು **(-)400.79 ಕೋಟಿ** ರೂ.ಗಳಾಗುವ ನಿರೀಕ್ಷೆಯಿದೆ. 2003-2004ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು **(-)105.68 ಕೋಟಿ** ರೂ.ಗಳೆಂದು ತೋರಿಸಲಾಗಿತ್ತು.

ಆಯವ್ಯಯ ಅಂದಾಜುಗಳು 2003-2004

102. 2004-2005ನೇ ಸಾಲಿನ ಒಟ್ಟು ಜಮೆ **30533.01 ಕೋಟಿ** ರೂ.ಗಳಾಗಿದೆ. ಇದರಲ್ಲಿ **24852.47 ಕೋಟಿ** ರೂ.ಗಳ ರಾಜಸ್ವ ಜಮೆ ಮತ್ತು 5680.54 **ಕೋಟಿ** ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು **30285.48 ಕೋಟಿ** ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ **24988.17 ಕೋಟಿ** ರೂ.ಗಳು ರಾಜಸ್ವ ವೆಚ್ಚ ಮತ್ತು **5297.31 ಕೋಟಿ** ರೂ.ಗಳು ಬಂಡವಾಳ ವೆಚ್ಚವಾಗಿವೆ.

103. ಸರ್ಕಾರವು ತೆರಿಗೆ ರಾಜಸ್ವದ ಮೂಲಕ **14290.84 ಕೋಟಿ** ರೂ.ಗಳನ್ನು ಮತ್ತು ತೆರಿಗೆಯೇತರ ರಾಜಸ್ವದ ಮೂಲಕ **4819.13 ಕೋಟಿ** ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನಿಟ್ಟುಕೊಂಡಿದೆ. ಇದಲ್ಲದೆ ಸಣ್ಣ ಉಳಿತಾಯದಿಂದ **2615.90 ಕೋಟಿ** ರೂ.ಗಳನ್ನು; ಮಾರುಕಟ್ಟೆ ಎತ್ತುವಳಿಯಿಂದ **1087.96 ಕೋಟಿ** ರೂ.ಗಳನ್ನು (ನಿವ್ವಳ); ಒಪ್ಪಂದದ ಸಾಲಗಳಿಂದ **585.00 ಕೋಟಿ** ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ **2237.91 ಕೋಟಿ** ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

104. ಮೇಲಿನ ಅಂದಾಜುಗಳ ರೀತ್ಯಾ ರಾಜಸ್ವ ಕೊರತೆಯು **135.70 ಕೋಟಿ** ರೂ.ಗಳು ಮತ್ತು ವಿತ್ತೀಯ ಕೊರತೆಯು **3757.04 ಕೋಟಿ** ರೂ.ಗಳಾಗಲಿದೆ.

105. ಆರಂಬಿಕ ಶಿಲ್ಕು **(-)400.79** ರೂ.ಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಂತಿಮ ಶಿಲ್ಕು **(-)153.26** ಕೋಟಿ ರೂ.ಗಳಾಗುವ ಅಂದಾಜಿದೆ. ಈ ವರ್ಷದಲ್ಲಿ ವೆಚ್ಚಗಳ ನಿಯಂತ್ರಣ ಮತ್ತು ತೆರಿಗೆ ಸಂಗ್ರಹಣೆಯ ಮೂಲಕ ಈ ಕೊರತೆಯನ್ನು ಭರಿಸುವ ವಿಶ್ವಾಸ ನನಗಿದೆ.

ವಿಶ್ವಾಸದ ಮುಂದಿನ ನೋಟ

106. ಭವಿಷ್ಯದ ನನ್ನ ನೋಟವು ಹಿಂದಿನ ಸಾಧನೆಗಳ ಯಶಸ್ಸನ್ನು ಆಧರಿಸಿ ರೂಪುಗೊಂಡಿದೆ. ನಮ್ಮ ಭವಿಷ್ಯವು ಗ್ರಾಮೀಣ - ನಗರ ಎನ್ನುವ ವಿಭಜನೆಯ ಭಾವನೆಯನ್ನು ಕೆರಳಿಸುವುದರಲ್ಲಿ ಅಡಗಿಲ್ಲ. ಇವೆರಡರ ಅಂತರವನ್ನು ಕಿರಿದುಗೊಳಿಸಿ ಗ್ರಾಮೀಣ ಕರ್ನಾಟಕದ ಜೀವನ ಗುಣಮಟ್ಟವನ್ನು ಸುಧಾರಿಸುವುದರಲ್ಲಿ ಅಡಗಿದೆ. ಇದನ್ನು ಸಾಧಿಸಬೇಕಾದರೆ ಜೀವನ ಸೌಲಭ್ಯಗಳು ಉದ್ಯೋಗ ಸ್ಥಳದಲ್ಲಿ ಮಾತ್ರವಲ್ಲದೆ ಅವರ ಮನೆಗಳಲ್ಲಿ ಕೂಡ ದೊರಕುವಂತೆ ಮಾಡಬೇಕು.

107. ನಾವೀಗ ಇತಿಹಾಸದ ಕವಲುದಾರಿಯಲ್ಲಿದ್ದೇವೆ. ಉದಯ ರವಿಯಂತೆ ಕಂಗೊಳಿಸುತ್ತಿರುವ ಕರ್ನಾಟಕವು ಆಧುನಿಕ, ಪ್ರಗತಿಪರ ಮತ್ತು ಸಮೃದ್ಧತೆಯ ಕಡೆಗೆ ಚಿಮ್ಮಲು ಸರ್ವಸನ್ನದ್ಧವಾಗಿ ನಿಂತಿದೆ. ಕರ್ನಾಟಕವನ್ನು ಉತ್ತಮ, ಸುಸಂಸ್ಕೃತ ರಾಜ್ಯವನ್ನಾಗಿ ಹೊರಹೊಮ್ಮಿಸಲು ನಾವು ಶ್ರಮಿಸೋಣ. ಈ ಸಂದರ್ಭದಲ್ಲಿ ಮೈಸೂರು ಮಲ್ಲಿಗೆಯ ಕವಿ ದಿವಂಗತ ಶ್ರೀ ಕೆ.ಎಸ್. ನರಸಿಂಹಸ್ವಾಮಿ ಯವರ ಕವಿವಾಣಿ ನನ್ನ ಸ್ಮೃತಿಪಟಲದಲ್ಲಿ ಮೂಡಿ ಬರುತ್ತಿದೆ.

ನಗುತಿಹಳು ತಾಯಿ, ಕನ್ನಡದ ದೇವಿ

ಬಾನೆದೆಗೆ ಮುತ್ತುಕೊಟ್ಟು,
ದುಡಿವವರ ರಟ್ಟೆಗುಸಿರನ್ನು ತುಂಬಿ
ಕಣ್ಣಲ್ಲಿ ದೀಪವಿಟ್ಟು.
ಹೊಸತೊಂದು ನಾಡ ಕಟ್ಟುವೆವು, ತಾಯಿ,
ಬೆನ್ನಟ್ಟಿ ಮುಂದೆ ಕಳಿಸು;
ಮುಂದಿಟ್ಟ ಹೆಜ್ಜೆ ಹಿಂದೆಗೆಯದಂತೆ
ನಡೆಯುವುದ ನಮಗೆ ಕಲಿಸು.
ಮೈಬೆವರ ಸುರಿಸಿ ದುಡಿವಂತೆ ಮಾಡು
ಒಳಭೇದವನ್ನು ಅಳಿಸು.
ಬಡತನವ ತೊಡೆವ ಸಂಗ್ರಾಮದಲ್ಲಿ
ಶುಭವನ್ನು ನಮಗೆ ಹರಸು.

108. ನಾನು ಈಗ 2004-05 ರ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದು 2004-05 ನೇ ಸಾಲಿನ ಜುಲೈ 31, 2004ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್ - ಜೈ ಕರ್ನಾಟಕ

ಬಜೆಟ್ ವಿಹಂಗಮ

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2003-04	ಪರಿಷ್ಕೃತ ಅಂದಾಜು 2003-04	ಬಜೆಟ್ ಅಂದಾಜು 2004-05
	ಪ್ರಾರಂಭ ಶಿಲ್ಕು	-173.34	70.55	-400.79
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	12588.38	12962.88	14290.84
	ಕೇಂದ್ರ ತೆರಿಗೆಯಲ್ಲಿ ಪಾಲು	3044.76	3243.15	3577.10
	ಕೇಂದ್ರ ಸರ್ಕಾರದ ಅನುದಾನಗಳು	2498.70	2099.34	2165.40
	ತೆರಿಗೆಯೇತರ ರಾಜಸ್ವ	1713.33	3426.47	4819.13
	ಒಟ್ಟು-ಎ. I	**19845.17**	**21731.84**	**24852.47**
II.	ವೆಚ್ಚ :			
	ಸಾಮಾಜಿಕ ಸೇವೆ	7141.41	6878.25	7098.43
	ಆರ್ಥಿಕ ಸೇವೆ	5706.78	5471.01	5196.22
	ಸಾಮಾನ್ಯ ಸೇವೆ	8392.62	9946.03	11895.02
	ಸಹಾಯಾನುದಾನ ಮತ್ತು ಅಂಶದಾನ	739.68	754.99	798.50
	ಒಟ್ಟು-ಎ. II	**21980.49**	**23050.28**	**24988.17**
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	-2135.32	-1318.44	-135.70

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2003-04	ಪರಿಷ್ಕೃತ ಅಂದಾಜು 2003-04	ಬಜೆಟ್ ಅಂದಾಜು 2004-05
	ಬಿ. ಬಂಡವಾಳ ಲೆಕ್ಕ			
I.	ಜಮೆ :			
	ಭಾರತ ಸರ್ಕಾರದಿಂದ ಸಾಲ	2931.50	2284.27	2237.91
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	973.51	2169.51	1087.96
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	2336.40	2710.00	3200.91
	ಸಾಲಗಳು ಮತ್ತು ಮುಂಗಡಗಳ ವಸೂಲಿ	100.50	100.50	29.91
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	720.00	1073.70	-876.15
	ಒಟ್ಟು-ಬಿ. I	**7061.91**	**8337.98**	**5680.54**
II.	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	3561.66	3825.29	3201.37
	ಕೇಂದ್ರ ಸಾಲಗಳ ಮರುಸಂದಾಯ	639.26	2915.96	1379.61
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	221.70	228.76	266.45
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	436.31	520.87	449.88
	ಒಟ್ಟು-ಬಿ. II	**4858.93**	**7490.88**	**5297.31**
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	2202.98	847.10	383.23
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	67.66	-471.34	247.53
ಡಿ.	ಮುಕ್ತಾಯ ಶಿಲ್ಕು	-105.68	-400.79	-153.26

ಅನುಬಂಧ - I

(ಪ್ಯಾರಾ - 95)

2004-2005ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

	ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ.	**ಆರ್ಥಿಕ ಸೇವೆಗಳು**		
	ಕೃಷಿ ಮತ್ತು ಸಂಬಂಧಪಟ್ಟ ಸೇವೆ	481.14	4.41
	ಗ್ರಾಮೀಣ ಅಭಿವೃದ್ಧಿ	421.72	3.87
	ವಿಶೇಷ ಪ್ರದೇಶ ಯೋಜನೆ	62.30	0.57
	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	2641.51	24.22
	ಶಕ್ತಿ ಮೂಲಗಳು	2608.76	23.92
	ಕೈಗಾರಿಕೆ ಮತ್ತು ಖನಿಜಗಳು	86.75	0.80
	ಸಾರಿಗೆ	1406.26	12.90
	ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	10.44	0.10
	ಸಾಮಾನ್ಯ ಆರ್ಥಿಕ ಸೇವೆಗಳು	222.17	2.04
ಬಿ.	**ಸಮಾಜ ಸೇವೆಗಳು**		
	ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	524.57	4.81
	ಆರೋಗ್ಯ	143.92	1.32
	ನೀರು ಸರಬರಾಜು ಮತ್ತು ನೈರ್ಮಲ್ಯ	604.46	5.54
	ವಸತಿ ಮತ್ತು ನಗರಾಭಿವೃದ್ಧಿ	1159.42	10.63
	ವಾರ್ತಾ ಮತ್ತು ಪ್ರಚಾರ	2.61	0.02
	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ		
	ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	437.62	4.01
	ಕಾರ್ಮಿಕ ಮತ್ತು ಉದ್ಯೋಗ	15.01	0.14
ಸಿ.	**ಸಾಮಾನ್ಯ ಸೇವೆಗಳು**	75.57	0.69
	ಒಟ್ಟು	**10904.23**	**100.00**






(ಆಯವ್ಯಯ ಅಂದಾಜುಗಳು)
2614.72, 18%
943.42, 7%
1428.70, 10%
378.25, 3%
0
1000
2000
3000
4000
5000
6000
7000
ರಾಜ್ಯ ಅಬಕಾರಿ
ಮೋಟಾರು ವಾಹನಗಳು
ಇತರೆ


ವಲಯವಾರು (ಯೋಜನಾ) ವೆಚ್ಚ 2004-05 (ಕೋಟಿ ರೂ.ಗಳಲ್ಲಿ)
ಗ್ರಾಮೀಣ ಅಭಿವೃದ್ಧಿ: 421.72; 3.87%
ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು: 481.14; 4.41%
ಇತರೆ: 825.72; 7.57%
ನೀರಾವರಿ ಮತ್ತು ಪ್ರವಾಹ ನಿಯಂತ್ರಣ: 2641.51; 24.22%
ಇಂಧನ: 2608.76; 23.92%
ಕೈಗಾರಿಕೆ ಮತ್ತು ಖನಿಜಗಳು: 86.75; 0.80%
ನೀರು ಪೂರೈಕೆ ಮತ್ತು ನೈರ್ಮಲ್ಯ: 604.46; 5.54%
ಆರೋಗ್ಯ ಮತ್ತು ಕುಟುಂಬ ಕಲ್ಯಾಣ: 143.92; 1.32%
ಸಾರಿಗೆ: 1406.26; 12.90%
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ: 524.57; 4.81%
ವಸತಿ ಮತ್ತು ನಗರಾಭಿವೃದ್ಧಿ: 10.63%

Honourable Speaker,

1. I rise to present the budget for the year 2004-05.

2. It is an honour to present the fifth consecutive budget of my Government. The last four years and more have been significant in the development of the State and the progress of our people.

3. A **Vibrant Karnataka** today occupies a position of pre-eminence amongst the states of the Union and has contributed in no small measure to a Resurgent India.

4. In my first budget, I had set out the principal challenges facing the State: empowerment of women, high economic growth, strengthening agriculture, sustaining investment in irrigation, expansion of infrastructure, a pro-active industrial policy, good governance and prudent fiscal management.

5. I look back with satisfaction that all of these have been addressed by my Government with considerable success.

6. Karnataka, as the world sees it today, and I say this with legitimate pride, ranks as a leader in Society, Economy and Polity in the country and has emerged as "Global Karnataka". The last five years, three of which were spent combating unrelenting and consecutive droughts, have seen Peace, Prosperity and Progress in all walks of life and for all sections of our people. This was largely because my Government rose to the occasion and strove to ring fence the affected population. The magnitude of the relief effort is unprecedented in reach and scale.

7. I salute the people of the state for their fortitude and patience. The fact that the state has shown strong economic growth even in adversity is testimony to the success of our policies and a measure of the confidence people repose in us. Not only have we emerged from distress, but we have also been shining through.

8. In the words of *Mirza Ghalib*:

Hum parvarishe khạke watan,
karte rahe hein
Bulandi ke muqaamon ko
chhoote rahe hein
Vaadon ko nibhaane ka
jatan karte rahenge
Haathon se mile haath
To fir unki madad se
Veeraane bhee ho gar!
To chaman karte rahenge

Economic Situation:

9. The resilience of Karnataka's economy has been on display in the last three years. Latest estimates indicate that during 2003-04 the GSDP has grown at the rate of **6.2%.** Despite three debilitating droughts, we have seen an average real growth of 5% in GSDP over the last five years. The agriculture and allied sectors saw negative real growth in 2001-02 and 2002-03 due to drought.

10. The domino effect on industry, caused by depressed rural incomes and consumption expenditure, caused depressed real growths of about **2%** and **4%** in those years. Growth in industrial production has however recovered to about 6% in 2003-04 despite a third deficient monsoon.

11. This, I believe is not due to any feel-good factor but primarily due to the sustained efforts of my Government to provide quality infrastructure and a conducive environment to attract private investment.

